MAA ಫ್ರೆಂಡ್ಸ್ ಸಾರಥ್ಯದಲ್ಲಿ...

www.yuvamarga.com | Yuva Marga | yuva_marga_

# ಯುವ ಮಾರ್ಗ

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

ಸಂಪುಟ: 05 | ಸಂಚಿಕೆ: 60 | ಶನಿವಾರ : 20-12-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 05 | ISSUE: 60 | SATURDAY : 20-12-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

## ಜಿಲ್ಲಾಧಿಕಾರಿಗಳು, ಪಾಲಿಕೆ ಆಯುಕ್ತರ ನಿರ್ದೇಶನ ರಾಯಚೂರು ಸಿಟಿಯ ಹೋಟೆಲ್, ರೆಸ್ಟೋರೆಂಟ್‌ಗಳ ಮೇಲೆ ಮುಂದುವರೆದ ದಾಳಿ: ಆಹಾರದ ಗುಣಮಟ್ಟ, ಶುಚಿತ್ವ ಪರಿಶೀಲನೆ



ಯುವಮಾರ್ಗ ಸುದ್ದಿ

**ರಾಯಚೂರು,ಡಿ.19–** ಜಿಲ್ಲೆಯ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಹಾಗೂ ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರು ಸಾರ್ವಜನಿಕ ಹಿತದೃಷ್ಟಿಯಿಂದಾಗಿ ನೀಡಿದ ನಿರ್ದೇಶನದ ಮೇರೆಗೆ ರಾಯಚೂರು ವಿಭಾಗದ ಸಹಾಯಕ ಆಯುಕ್ತರಾದ ಗಜಾನನ ಬಾಳೆ ಹಾಗೂ ಇನ್ನಿತರ ಅಧಿಕಾರಿಗಳ ನೇತೃತ್ವದಲ್ಲಿ ಡಿ.18ರಂದು ಸಂಜೆ ಹೊತ್ತಿಗೆ ರಾಯಚೂರು ಸಿಟಿಯಲ್ಲಿನ ಕೆಲ ಹೊಟೆಲಗಳು ಮತ್ತು ರೆಸ್ಟೊರೆಂಟಗಳ ಮೇಲೆ ದಾಳಿ ನಡೆಸಿ ಪರಿಶೀಲಿಸಿದರು.

ರಾಯಚೂರು ಮಹಾನಗರ ಪಾಲಿಕೆಯ ಸಮಿತಿ ಕಾರ್ಯದರ್ಶಿ ಶ್ರೀಕೃಷ್ಣ ಶಾವಂತಗೇರಿ, ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕರಾದ ನಜೀರ್ ಅಹಮ್ಮದ್, ರಾಯಚೂರು ತಾಲೂಕು ತಹಶೀಲ್ದಾರ್ ಸುರೇಶ ವರ್ಮ, ಮಹಾನಗರ ಪಾಲಿಕೆಯ ಆರೋಗ್ಯಾಧಿಕಾರಿ ಡಾ.ಮಹಮ್ಮದ್ ಶಾಕೀರ್ ಮೊಹಿಯುದ್ದಿನ್, ಪಾಲಿಕೆ ಸಂಘಟನಾಧಿಕಾರಿ ಕೃಷ್ಣ ಕಟ್ಟಿಮನಿ ಮತ್ತು ಪಾಲಿಕೆ ನಿರೀಕ್ಷಣಾಧಿಕಾರಿಗಳು ಮತ್ತು ಇನ್ನಿತರರನ್ನು ಒಳಗೊಂಡ ಅಧಿಕಾರಿಗಳು ಮತ್ತು ಸಿಬ್ಬಂದಿಯ ತಂಡವು ಸ್ಟೇಷನ್ ರಸ್ತೆ ಸೇರಿದಂತೆ ನಗರದ ವಿವಿಧ ಹೋಟೆಲ್ ಹಾಗೂ ರೆಸ್ಟೋರಂಟ್‌ಗಳ ಮೇಲೆ ದಾಳಿ ನಡೆಸಿ, ಅಲ್ಲಿ ತಯಾರಿಸಿದ್ದ ಬೇರೆ ಬೇರೆ ನಮೂನೆಯ ಉಪಹಾರ ಮತ್ತು ಊಟದ ಆಹಾರದ ಗುಣಮಟ್ಟ, ಅಲ್ಲಿನ ಶುಚಿತ್ವ, ಅಡುಗೆ ತಯಾರಕರ ಆರೋಗ್ಯ, ಲೈಸೆನ್ಸ್ ಮತ್ತು ಇನ್ನಿತರ ವಿಷಯಗಳ ಬಗ್ಗೆ ಸಮಗ್ರ ಪರಿಶೀಲಿಸಿ, ದುರವಸ್ಥೆ ಕಂಡು ಬಂದ ಕಡೆಗಳಲ್ಲಿನ ಹೊಟೆಲ್ ಹಾಗೂ ರೆಸ್ಟೊರೆಂಟಗಳ ಮೇಲೆ ದಂಡ ವಿದಿಸಿ, ಸರಿಪಡಿಸಿಕೊಳ್ಳಲು ಎಚ್ಚರಿಕೆ ನೀಡಿದರು.

ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿನ ಪ್ರಮುಖ ಹೋಟೆಲ್‌ಗಳ ಮೇಲೆ ದಾಳಿ ನಡೆಸಿ ಅಲ್ಲಿನ ಅಡುಗೆ ಕೋಣೆಗಳಿಗೆ ಪ್ರವೇಶಿಸಿ ಆಹಾರ ಸಿದ್ಧತೆಯ ಪರಿ, ಕುಡಿವ ನೀರು ಸಂಗ್ರಹಕ್ಕೆ ಬಳಸಿದ ತೊಟ್ಟಿ ಮತ್ತು ಅಡುಗೆಗೆ ಬಳಸುವ ಪದಾರ್ಥಗಳನ್ನು ಪರಿಶೀಲಿಸಿದರು.

ಅಡುಗೆಗೆ ಸಂಗ್ರಹಿಸಿದ ದವಸ-ಧಾನ್ಯಗಳ ಗುಣಮಟ್ಟ, ತರಕಾರಿಗಳು, ಖರೀದಿಸಿದ್ದ ಕೆಲ ಪದಾರ್ಥಗಳ ಕಾಲಾವಧಿ ವಿವರ, ಅಡುಗೆ ಎಣ್ಣೆ, **(2ನೇಪುಟಕ್ಕೆ)**



## ನನಗೆ ರಾಜಕೀಯ ನಿಶ್ಶಕ್ತಿ ಇಲ್ಲ : ವಿಪಕ್ಷಗಳಿಗೆ ಸಿಎಂ ಸಿದ್ದು ತಿರುಗೇಟು

**ಬೆಳಗಾವಿ,ಡಿ.19–** ರಾಜಕೀಯವಾಗಿ ತಮಗೆ ಯಾವತ್ತೂ ನಿಶ್ಶಕ್ತಿ ಇಲ್ಲ, ಅಂತಹ ಸಂದರ್ಭವೂ ಬರುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ದೃಢವಾಗಿ ಹೇಳಿದ್ದಾರೆ. ಅದಕ್ಕೆ ಪೂರಕವಾಗಿ ವಿರೋಧ ಪಕ್ಷಗಳು ಹಾಗಿದ್ದರೆ ಐದು ವರ್ಷ ಅಧಿಕಾರ ಪೂರ್ಣಗೊಳಿಸುವುದು ಖಚಿತವೇ ಎಂದು ಕೆಣಕಿವೆ.

ಬೆಳಗಾವಿಯಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿ ಕಳೆದ ಎಂಟು ದಿನಗಳಲ್ಲಿ ನಡೆದ ಉತ್ತರ ಕರ್ನಾಟಕ ಅಭಿವೃದ್ಧಿಯ ಕುರಿತ ಚರ್ಚೆಗೆ ಇಂದು ಬೆಳಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನಸಭೆಯಲ್ಲಿ ಉತ್ತರ ನೀಡಿದರು. ಆರಂಭದ ಪೀಠಿಕೆಯಲ್ಲಿ ಬೆಳಗಾವಿಯ ವಿಧಾನ ಮಂಡಲದ ಅಧಿವೇಶನ 2006ರಲ್ಲಿ ಆರಂಭವಾಯಿತು, ಅಂದಿನಿಂದ ಇಂದಿನವರೆಗಿನವರೆಗೂ ಕಲಾಪದ ಮೊದಲ ದಿನದಿಂದ ಕೊನೆಯವರೆಗೂ ಚರ್ಚೆ ನಡೆದು, ಕೊನೆಯ ದಿನ ಉತ್ತರ ನೀಡುತ್ತಿರುವುದು ಇದೇ ಮೊದಲು ಎನಿಸುತ್ತಿದೆ ಎಂದರು.



ನಾನು ನಿನ್ನೆಯೇ ಉತ್ತರ ನೀಡಬೇಕು ಎಂದುಕೊಂಡಿದ್ದೆ. ಆದರೆ ನಿಶ್ಶಕ್ತಿ ಕಾಡುತ್ತಿತ್ತು. ಅದಕ್ಕಾಗಿ ಇಂದು ಉತ್ತರ ನೀಡುತ್ತಿದ್ದೇನೆ ಎಂದು ಹೇಳಿದರು.ಈ ಸಂದರ್ಭದಲ್ಲಿ ಎದ್ದು ನಿಂತ ವಿರೋಧ ಪಕ್ಷದ ನಾಯಕ ಆರ್.ಅಶೋಕ್, ಈಗ ಶಕ್ತಿ ಬಂದಿದೆಯೇ. ಕಳೆದ ನಾಲ್ಕು ದಿನಗಳಿಂದಲೂ ನಿಮಲ್ಲಿ ನಿಶ್ಶಕ್ತಿ ಕಾಣುತ್ತಿತ್ತು. ಈಗ ನೋಡಿದರೆ ನಿಮಗೆ ರಾಜಕೀಯವಾಗಿಯೂ ಶಕ್ತಿ ಬಂದಿದೆ. ನಿಶ್ಶಕ್ತಿ ಹೋಗಿದೆ ಎಂದು ಕಾಣುತ್ತಿದೆ. ಆ ಶಕ್ತಿಯನ್ನು ಉತ್ತರ ಕರ್ನಾಟಕ ಭಾಗದ ಅಭಿವೃದ್ಧಿಗೆ ಹಣ ಬಿಡುಗಡೆಗೆ ಮಾಡಲು ಬಳಕೆ ಮಾಡಿ ಎಂದು ಹೇಳಿದರು.

ಉತ್ತರ ನೀಡಿದ ಸಿದ್ದರಾಮಯ್ಯ, ನನಗೆ ರಾಜಕೀಯವಾಗಿ ನಿಶ್ಶಕ್ತಿ ಬರಲು ಸಾಧ್ಯವೇ ಇಲ್ಲ. ಅಂತಹ ಅವಕಾಶಗಳಾಗಲಿ, ಸಂದರ್ಭಗಳಾಗಲಿ ಇಲ್ಲವೇ ಇಲ್ಲ. ರಾಜಕೀಯ ನಿಶ್ಶಕ್ತಿ ಇಲ್ಲ, ಶಾರೀರಿಕ ನಿಶ್ಶಕ್ತಿ ಇತ್ತು ಎಂದರು.ಇದಕ್ಕೆ ನಗುತ್ತಲೇ ಪ್ರತಿಕ್ರಿಯಿಸಿದ ಆರ್.ಅಶೋಕ್, ಪ್ರತಿ ದಿನ ಡಿನ್ನರ್ ಮೀಟಿಂಗ್‌ಗಳು ನಡೆಯುತ್ತಲೇ ಇವೆ ಕಿಚಾಯಿಸಿದರು.

ಬಿಜೆಪಿಯ ವಿ.ಸುನೀಲ್ ಕುಮಾರ್, ನಿಮ ಆರೋಗ್ಯದ ನಿಶ್ಶಕ್ತಿ ಬಗ್ಗೆ ಅನುಮಾನ ಇಲ್ಲ. ರಾಜಕೀಯ ನಿಶ್ಶಕ್ತಿಯ ಬಗ್ಗೆ ಚರ್ಚೆಯಾಗುತ್ತಿದೆ ಎಂದು ಹೇಳಿದರು.ಇದಕ್ಕೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ನನಗೆ ರಾಜಕೀಯ ನಿಶ್ಶಕ್ತಿ ಯಾವಾಗಲೂ ಇಲ್ಲ ಹಾಗೂ ರಾಜಕೀಯವನ್ನು ಅಷ್ಟೊಂದು ತಲೆ ಕೆಡಿಸಿಕೊಂಡು ಮಾಡಬೇಕಾದ ಅಗತ್ಯವೂ ಇಲ್ಲ. ಅಧಿಕಾರವನ್ನು ಜನ ಕೊಡುತ್ತಾರೆ. ಅವರ ಆಶೀರ್ವಾದ ಇದ್ದರೆ ಆಡಳಿತ ಪಕ್ಷವಾಗುತ್ತೇವೆ, ಇಲ್ಲವಾದರೆ ವಿರೋಧ ಪಕ್ಷದಲ್ಲಿ **(2ನೇ ಪುಟಕ್ಕೆ)**

ನಿರ್ಮಲ ತುಂಗಭದ್ರಾ ಅಭಿಯಾನ: ಜಲ ಜಾಗೃತಿ : ಜನಜಾಗೃತಿ ಪಾದಯಾತ್ರೆ

## ತುಂಗಭದ್ರಾ ನದಿ ಸಂರಕ್ಷಣೆ ಪ್ರತಿಯೊಬ್ಬರ ಜವಬ್ದಾರಿ: ಎನ್.ಉದಯಕುಮಾರ ಸಾಹುಕಾರ

ಯುವಮಾರ್ಗ ಸುದ್ದಿ

**ಮಾನ್ವಿ,ಡಿ.19–**ಜೀವ ನದಿ ತುಂಗಭದ್ರಾ ಒಡಲಿಗೆ ಭಾರಿ ಪ್ರಮಾಣದಲ್ಲಿ ವಿವಿಧ ರೀತಿಯ ತ್ಯಾಜ್ಯಗಳು, ಕೈಗಾರಿಕಾ ಕಲುಷಿತ ನೀರು ನದಿಯನ್ನು ಸೇರುತ್ತಿದ್ದು ಪ್ರಸ್ತುತ ನದಿಯ ನೀರನ್ನು ನೇರವಾಗಿ ಬಳಕೆ ಮಾಡದಂತಾಗಿದೆ. ಮುಂದಿನ ಪೀಳಿಗೆಗಾಗಿ ಜಲಮೂಲಗಳ ಸಂರಕ್ಷಣೆಗಾಗಿ ಒತ್ತಾಯಿಸಿ ಡಿ.27ರಿಂದ ಕಿಷ್ಕಿಂದೆಯಿಂದ ಮಂತ್ರಾಲಯದವರೆಗೆ ನಿರ್ಮಲ ತುಂಗಭದ್ರಾ ಅಭಿಯಾನ ಜಲ ಜಾಗೃತಿ ಜನಜಾಗೃತಿಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು 3ನೇ ಹಂತದ ನಿರ್ಮಲ ತುಂಗಭದ್ರಾ ಅಭಿಯಾನ ಸಂಚಾಲಕ ಎನ್.ಉದಯಕುಮಾರ ಸಾಹುಕಾರ ಹೇಳಿದರು.

ಪಟ್ಟಣದ ಬಾಲಕರ ಸರ್ಕಾರಿ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜಿನಲ್ಲಿ ರಾಷ್ಟ್ರೀಯ ಸ್ವಾಭಿಮಾನ ಆಂದೋಲನ ನವದೆಹಲಿ, ನಿರ್ಮಲ ತುಂಗಭದ್ರಾ



ಅಭಿಯಾನ ಸಮಿತಿ ಶಿವಮೊಗ್ಗ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾದ ನಿರ್ಮಲ ತುಂಗಭದ್ರಾ ಅಭಿಯಾನ ಪಾದಯಾತ್ರೆಯ ಜಲ ಜಾಗೃತಿ -ಜನಜಾಗೃತಿ ಸಭೆಯನ್ನು ಉದ್ದೇಶಿಸಿ ಮಾಡಿದ ಅವರು ನದಿಗಳ ಮಾಲಿನ್ಯದಿಂದಾಗಿ ಜನರ ಆರೋಗ್ಯ ಮೇಲೆ ಉಂಟಾಗುವ ದುಷ್ಪರಿಣಾಮಗಳ ಗಂಭೀರತೆಯನ್ನು ಪ್ರತಿಯೊಬ್ಬರು ಅರಿಯಬೇಕಿದೆ. ಈ ನಿಟ್ಟಿನಲ್ಲಿ ಈ 3ನೇ ಹಂತದ ಆಂದೋಲನ ಪಾದಯಾತ್ರೆಯು ಒಟ್ಟು 680 ಕೀ.ಮಿ ಗಂಗಾವತಿಯ ಕಿಷ್ಕಿಂದೆಯಿಂದ ಮಂತ್ರಾಲಯದ ವರೆಗೆ ಹಮ್ಮಿಕೊಳ್ಳಲಾಗಿದೆ ಎಂದರು.

ನಂತರ ಅಭಿಯಾನ ಸಮಿತಿಯ ಸದಸ್ಯರಾದ ಅನಿತಾ ನವಲಕಲ್ ಮಾತನಾಡಿ, ರಾಯಚೂರು ಜಿಲ್ಲೆಯ ಒಡಲಲ್ಲಿ ಎರಡು ನದಿಗಳಾದ ಕೃಷ್ಣೆ, ತುಂಗಭದ್ರಾ ಹರಿಯುತ್ತಿದ್ದರೂ ಜಿಲ್ಲೆಯ ಜನರು ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸುವಂತಾಗಿದೆ. ರೈತರು ಬೆಳೆಗಳಿಗೆ ನೀರಿನ ಕೊರತೆ ಕಾಣಬಹುದಾಗಿದೆ **(2ನೇಪುಟಕ್ಕೆ)**

## ಬಾಲ್ಯ ವಿವಾಹ ಪದ್ಧತಿ ನಿರ್ಮೂಲನೆ ಕಾರ್ಯಕ್ಕೆ ಸರ್ವರೂ ಕೈಜೋಡಿಸಬೇಕು

ಯುವಮಾರ್ಗ ಸುದ್ದಿ

**ರಾಯಚೂರು,ಡಿ.19–**ಸಾಮಾಜಿಕ ಪಿಡುಗಾಗಿ ಪರಿಣಮಿಸಿದ ಬಾಲ್ಯ ವಿವಾಹದಿಂದಾಗಿ ಮಕ್ಕಳ ಭವಿಷ್ಯ ಹಾಳಾಗುತ್ತಿದೆ. ಆದ್ದರಿಂದ ಸರ್ಕಾರದ ಜೊತೆ ಎಲ್ಲರೂ ಸೇರಿ ಜಾಗೃತಿ ಮೂಡಿಸಿದಾಗ ಬಾಲ್ಯ ವಿವಾಹ ಪದ್ಧತಿಯನ್ನು ನಿರ್ಮೂಲನೆ ಮಾಡಲು ಸಾಧ್ಯವಾಗುತ್ತದೆ ಎಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ವೆಂಕಟೇಶ್ ಅವರು ತಿಳಿಸಿದರು.

ಡಿಸೆಂಬರ್ 19ರ ಶುಕ್ರವಾರ ದಂದು ನಗರದ ಮಾಣಿಕ್ ಪ್ರಭು ಅಂಧ ಮಕ್ಕಳ ಶಾಲೆಯಲ್ಲಿ ಎಂ.ಆರ್.ಡಬ್ಲ್ಯೂ ಮತ್ತು ವಿ.ಆರ್.ಡಬ್ಲ್ಯೂಗಳಿಗೆ ಮಕ್ಕಳ ರಕ್ಷಣಾ ಕಾನೂನುಗಳ ಕುರಿತು ಹಮ್ಮಿಕೊಂಡಿದ್ದ ತರಬೇತಿ ಕಾರ್ಯಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬಾಲ್ಯ ವಿವಾಹದಿಂದ ಮಕ್ಕಳ ಶಿಕ್ಷಣ ಮೊಟಕಾಗುತ್ತದಲ್ಲದೆ ಅವರ ಭವಿಷ್ಯ




ನಾಶವಾಗಲಿದೆ. ಮಕ್ಕಳ ಮೇಲೆ ಅನೇಕ ರೀತಿಯಲ್ಲಿ ದುಷ್ಪರಿಣಾಮ ಉಂಟು ಮಾಡುವ ಈ ಕೆಟ್ಟ ಪದ್ಧತಿ ಬಗ್ಗೆ ಜಾಗೃತಿ ಮೂಡಿಸುವುದು ಅಗತ್ಯವಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕುಮಾರಸ್ವಾಮಿ ಅವರು ಮಾತನಾಡಿ, ಮಕ್ಕಳಿಗೆ ಸುರಕ್ಷಿತ ವಾತಾವರಣ ಕಲ್ಪಿಸುವುದು ಇಂದಿನ ಅಗತ್ಯವಾಗಿದೆ. ಎಲ್ಲಾ ಇಲಾಖೆಗಳ ಎಲ್ಲಾ ಹಂತದ ಅಧಿಕಾರಿಗಳು ಹಾಗೂ ಸಾರ್ವಜನಿಕರು ಈ ಬಗ್ಗೆ ಅರಿಯಬೇಕು.

ಮಕ್ಕಳು, ಮೊಬೈಲ್ ಮತ್ತು ಸಾಮಾಜಿಕ ಜಾಲತಾಣಗಳ ಗೀಳಿಗೆ ಬಿದ್ದು, ಆನ್ಲೈನ್ ವಂಚಕರ ಜಾಲಕ್ಕೆ ಬಲಿ ಆಗುತ್ತಿರುವದು ಕೂಡ ಹೆಚ್ಚಾಗುತ್ತಿದ್ದು, ಈ ಬಗ್ಗೆಯೂ ಕೂಡ ಜಾಗೃತಿ ಮೂಡಿಸಿ ಮಕ್ಕಳನ್ನು ರಕ್ಷಿಸುವ ಕೆಲಸ ಮಾಡಬೇಕು ಎಂದರು.

ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿ ಅಮರೇಶ್ ಹಾವಿನ ಅವರು ಪ್ರಾಸ್ತಾವಿಕ ಮಾತನಾಡಿದರು.

ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷ ಸುದರ್ಶನ್ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿ ಈರಣ್ಣ ಕೊಸಗಿ ಅವರು ಕಾರ್ಯ ಕ್ರಮವನ್ನು ಉದ್ದೇಶಿಸಿ **(2ನೇಪುಟಕ್ಕೆ..)**

## ಸಿಂಧನೂರಿನಲ್ಲಿ ಭತ್ತ ಅಭಿವೃದ್ಧಿ ಮಂಡಳಿ ಸ್ಥಾಪನೆಗೆ ಬೆಳಗಾವಿ ಸದನದಲ್ಲಿ ಬಸನಗೌಡ ಬಾದರ್ಲಿ ಒತ್ತಾಯ

ಯುವಮಾರ್ಗ ಸುದ್ದಿ

**ಬೆಳಗಾವಿ,19–**ವಿಧಾನ ಪರಿಷತ್ ಶಾಸಕ ಬಸನಗೌಡ ಬಾದರ್ಲಿ ಅವರು, ಜೀವನಾಡಿ ತುಂಗಭದ್ರ ಕ್ರಸ್ಟ್ ಗೇಟ್ ಗಳ ಕುರಿತು, ಕರ್ನಾಟಕ ತೊಗರಿ ಅಭಿವೃದ್ಧಿ ಮಂಡಳಿ ಹಾಗೂ ಭತ್ತ ಅಭಿವೃದ್ಧಿ ಮಂಡಳಿಯನ್ನು ಸಿಂಧನೂರು ತಾಲ್ಲೂಕಿನಲ್ಲಿ ಸ್ಥಾಪನೆ ಮಾಡುವಂತೆ ಬೆಳಗಾವಿಯಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿ ಶೂನ್ಯ ವೇಳೆಯಲ್ಲಿ ಒತ್ತಾಯಿಸಿದ್ದಾರೆ.

ಬೆಳಗಾವಿ ಚಳಿಗಾಲದ ಅಧಿವೇಶನದಲ್ಲಿ ಸದನದ ಶೂನ್ಯದ ವೇಳೆಯಲ್ಲಿ ಪ್ರಸ್ತಾಪಿಸಿದ ಅವರು, ರಾಯಚೂರು, ಕೊಪ್ಪಳ ಹಾಗೂ ಬಳ್ಳಾರಿ ಜಿಲ್ಲೆಯ ಭತ್ತ ಬೆಳೆಯುವ ರೈತರ ಬಲವರ್ಧನೆಯ ಹಿತದೃಷ್ಟಿಯಿಂದ 'ಕರ್ನಾಟಕ ತೊಗರಿ ಅಭಿವೃದ್ಧಿ ಮಂಡಳಿ' ಹಾಗೂ 'ಕಾಫಿ ಅಭಿವೃದ್ಧಿ ಮಂಡಳಿ'ಯ ರೀತಿಯಲ್ಲಿ ನಮ್ಮ ಸಿಂಧನೂರು ತಾಲೂಕಿನಲ್ಲಿಯೂ ಸಹ ರಾಜ್ಯ ಸರ್ಕಾರದಿಂದ 'ಭತ್ತ ಅಭಿವೃದ್ಧಿ ಮಂಡಳಿ'ಯನ್ನು ಸ್ಥಾಪನೆ ಮಾಡುವಂತೆ ಮನವಿ ಮಾಡಿದ್ದಾರೆ.

ಒಟ್ಟಾರೆಯಾಗಿ ಬೆಳಗಾವಿ ಚಳಿಗಾಲದ ಅಧಿವೇಶನ ಪ್ರಾರಂಭಗೊಂಡ ದಿನದಿಂದ ಎಂಎಲ್ಸಿ ಬಸನಗೌಡ ಬಾದರ್ಲಿಯವರು



ಸಿಂಧನೂರು ತಾಲೂಕಿನ ಸಕಲ ಮೂಲಭೂತ ಸಮಸ್ಯೆಗಳ ಕುರಿತು, ವಿದ್ಯಾರ್ಥಿ ಯುವ ಜನತೆಯ ಕುರಿತು, ರೈತಾಪಿ ಜನರ ಕುರಿತು ವಿವಿಧ ವಿಷಯಗಳ ಬಗ್ಗೆ ಸದನದಲ್ಲಿ ಚರ್ಚೆ ನಡೆಸುತ್ತಿದ್ದು, ಎಂಎಲ್ಸಿ ಬಸನಗೌಡ ಬಾದರ್ಲಿ ಹೇಳಿದ್ದನ್ನ ಸರ್ಕಾರ ಎಷ್ಟರಮಟ್ಟಿಗೆ ಪರಿಗಣಿಸುತ್ತದೆ ಎನ್ನುವುದು ಕಾದು ನೋಡಬೇಕಿದೆ.

## ಪ್ರತಿಯೊಂದು ಮಗು ಶಿಕ್ಷಣದಿಂದ ವಂಚಿತರಾಗಬಾರದು: ತಿರುಮಲರೆಡ್ಡಿ

ಯುವಮಾರ್ಗ ಸುದ್ದಿ

**ದೇವದುರ್ಗ,ಡಿ.19–** ತಾಲ್ಲೂಕಿನ ಗಬ್ಬೂರು ಗ್ರಾಮ ಉನ್ನತಿಕರಿಸಿದ ಬಾಲಕರ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳ ವಿಶೇಷ ಗ್ರಾಮ ಸಭೆ ಗ್ರಾಮ ಪಂಚಾಯತ್ ಗಬ್ಬೂರು ಮತ್ತು ಡಾನ್ ಬಾಸ್ಕೋ ಸಮಾಜ ಸೇವಾ ಸಂಸ್ಥೆ ದೇವದುರ್ಗ ಹಾಗೂ ಕ್ರೈ ಸಂಸ್ಥೆ ಬೆಂಗಳೂರು, ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಮಕ್ಕಳ ಗ್ರಾಮ ಸಭೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಮಕ್ಕಳು ಶಿಸ್ತು ಕಾಪಾಡಿಕೊಳ್ಳಬೇಕು, ಪಾಲಕರು ತಮ್ಮ ಮಕ್ಕಳಿಗೆ ಉತ್ತಮ ಪರಿಸರ ಒದಗಿಸಿಕೊಡಬೇಕು, ಪ್ರಾಥಮಿಕ ಹಂತದ ಮಕ್ಕಳು ಯಾರು ಕೂಡ ಶಿಕ್ಷಣದಿಂದ ವಂಚಿತರಾಗಬಾರದು, ಮಕ್ಕಳ ಹಕ್ಕುಗಳಿಗೆ ರಕ್ಷಣೆಗಾಗಿ ನಮ್ಮ ಗ್ರಾಮ ಪಂಚಾಯಿತಿ ಮತ್ತು ಸರಕಾರ ಮಕ್ಕಳಿಗಾಗಿ ಸಾಕಷ್ಟು ಶ್ರಮಿಸುತ್ತಿದೆ, ಅಲ್ಲದೆ ಸರಕಾರ ಮತ್ತು ಸಮುದಾಯ ಎಲ್ಲವು ಮಕ್ಕಳ




ರಕ್ಷಣೆಯ ಬಗ್ಗೆ ಕಾಳಜಿ ವಹಿಸುತ್ತಿದೆ, ಅಲ್ಲದೆ ಅಭಿವೃದ್ಧಿ ಅಧಿಕಾರಿಗಳು ಶಾಲಾ ಮಕ್ಕಳ ಜೊತೆ ಶಾಲೆಯಲ್ಲಿ ಇರುವ ಮೂಲಭೂತ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಿದರು. ಈ ಚರ್ಚೆಯಲ್ಲಿ ಎಲ್ಲಾ ಊರಿನ ಶಾಲೆಯ ಮಕ್ಕಳು ಭಾಗವಹಿದರು, ತಮ್ಮ ತಮ್ಮ ಶಾಲೆಯ, ವಸತಿ ನಿಲಯಗಳ ಹಾಗೂ ಬಸ್ ಸೌಲಭ್ಯಗಳ ಕುರಿತು ಮಕ್ಕಳು ಸಮಸ್ಯೆಗಳನ್ನು ಅಭಿವೃದ್ಧಿ ಅಧಿಕಾರಿಗಳಿಗೆ ನೇರವಾಗಿ ಸಭೆಯ ಮುಖಾಂತರ ತಿಳಿಸಿದ್ದರು. ನಂತರ ಅಭಿವೃದ್ಧಿ ಅಧಿಕಾರಿ ತಿರುಮಲರೆಡ್ಡಿ ಅವರು ಮಕ್ಕಳ ಸಮಸ್ಯೆಯನ್ನು ಕೆಲವೊಂದು ಸ್ಥಳದಲ್ಲಿಯೇ ಬಗೆಹರಿಸಿದ್ದರು, ಇನ್ನೂ ಕೆಲವೊಂದು ಸಂಬಂಧಪಟ್ಟವರಿಗೆ ಪತ್ರ ಬರೆದು ಸಮಸ್ಯೆ ಬಗೆಹರಿಸಲು ಪ್ರಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಮಕ್ಕಳಿಗೆ ಉತ್ತರಿಸಿ ದರು.

ನಂತರ ಕ್ರೈ ಸಂಸ್ಥೆ ಯೋಜನಾ ಧಿಕಾರಿಗಳಾದ ಕೆ.ಪಿ ಅನಿಲ್ ಕುಮಾರ ಅವರು ಮಾತನಾಡಿ, ಮಕ್ಕಳ ಸುರಕ್ಷತೆ ಮತ್ತು ಮಕ್ಕಳ ಭವಿಷ್ಯ ಗಟ್ಟಿ ಮಾಡಲು ಗ್ರಾಮ ಮಟ್ಟದಲ್ಲಿ ಜಾಗೃತಿ ಅನಿವಾರ್ಯ ಈ ಹಿನ್ನೆಲೆಯಲ್ಲಿ ಇಂದು ಮಕ್ಕಳ ಗ್ರಾಮ ಸಭೆ ಆಯೋಜನೆ ಮಾಡಿದ್ದು ಮಕ್ಕಳ ಸಮಸ್ಯೆ ಧೈರ್ಯದಿಂದ ಅಧಿಕಾರಿಗಳಿಗೆ ಹೇಳಿ ತಮ್ಮ ಸಮಸ್ಯೆಗೆ ಪರಿಹಾರ **(2ನೇಪುಟಕ್ಕೆ..)**

## ಮೊದಲನೇಯ ಪುಟದಿಂದ

# ತುಂಗಭದ್ರಾ ನದಿ ಸಂರಕ್ಷಣೆ ಪ್ರತಿಯೊಬ್ಬರ ಜವಬ್ದಾರಿ: ಎನ್.ಉದಯಕುಮಾರ ಸಾಹುಕಾರ

ಇದಕ್ಕೆಲ್ಲಾ ಪ್ರಮುಖ ಕಾರಣಗಳೆಂದರೆ ಅರಣ್ಯ ನಾಶ, ಪರಿಸರ ಮಾಲಿನ್ಯ, ಪ್ಲಾಸ್ಟಿಕ್ ತ್ಯಾಜ್ಯವನ್ನು ನದಿಯ ಒಡಲಿಗೆ ಸೇರಿಸುವದಾಗಿದೆ, ಬೃಹತ್ ಕೈಗಾರಿಕಾ ಫ್ಯಾಕ್ಟರಿಗಳ ನಿರ್ಮಾಣ ಹಾಗೂ ವಿಷಕಾರಿ ಕಲುಷಿತ ನೀರನ್ನು ನದಿಗೆ ಬಿಡಲಾಗುತ್ತದೆ. ನಮ್ಮ ಜಲಮೂಲ ನದಿಗಳ ಸಂರಕ್ಷಣೆ ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಿದೆ ಆದ್ದರಿಂದ ಪಾದಯಾತ್ರೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತರ ಮನವಿ ಮಾಡಿದರು. ಸಮಿತಿಯ ಸದಸ್ಯ ರಾಘವೇಂದ್ರ ಚೌಡ್ಕಿ ಪ್ರಾಸ್ತಾವಿಕವಾಗಿ ಮಾತನಡಿ, ನದಿಯ ಮಹತ್ವ , ಪವಿತ್ರತೆ ಬಗ್ಗೆ ಹಾಡು ಆಡುವ ಮೂಲಕ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಿದರು. ನಂತರ ಬಾಲಕರ ಸರ್ಕಾರಿ ಪ್ರೌಢಶಾಲೆ ಉಪಪ್ರಾಂಶುಪಾಲ ಮಹಿಬೂಬ್ ಪಾಷ ಹಾಗೂ ಶಾಲೆಯ ಸಹಶಿಕ್ಷಕರಾದ ಕರಿಬಸಯ್ಯಸ್ವಾಮಿ,ಎಂ.ಶಿವಾಜಿ, ರಿಯಾಜ್ ಹುಸೇನ್ ಮಾತನಾಡಿದರು.ನಂತರ ಶಿಕ್ಷಕರಿಗರ, ವಿದ್ಯಾರ್ಥಿಗಳಿಗೆ ಅಭಿಯಾನದ ಜಾಗೃತಿಯ ಬಿತ್ತಿ ಪತ್ರ,ಕರಪತ್ರಗಳನ್ನು ಹಂಚಿದರು.

ಈ ಸಂದರ್ಭದಲ್ಲಿ ನಿರ್ಮಲ ತುಂಗಭದ್ರಾ ಅಭಿಯಾನ ಸಮಿತಿ ಸದಸ್ಯರಾದ ನಾಗೇಶ ನಾಯಕ. ನಿವೇದಿತಾ.ಎನ್ ಸೇರಿದಂತೆ ಶಾಲೆಯ ಶಿಕ್ಷಕರು ಸಹ ಶಿಕ್ಷಕರು,ಉಪನ್ಯಾಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಪ್ರತಿಯೊಂದು ಮಗು ಶಿಕ್ಷಣದಿಂದ ವಂಚಿತರಾಗಬಾರದು: ತಿರುಮಲರೆಡ್ಡಿ

ಕಂಡುಕೊಳ್ಳಬೇಕೆಂದು ತಿಳಿಸಿದರು. ಮಕ್ಕಳು ಈ ದೇಶದ ಅಮೂಲ್ಯ ಸಂಪತ್ತು ಅವರಿಗೆ ಸಿಗಬೇಕಾದ ಹಕ್ಕು ಮತ್ತು ಅವರಿಗೆ ಇರುವಂತಹ ಸೌಲಭ್ಯಗಳನ್ನು ತಿಳಿಸಿದ್ದರು, ಸಮಾಜ ಮತ್ತು ಸರಕಾರ ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸುತ್ತಿವೆ ಎಂದರು.

ಗಬ್ಬೂರಿನ ಎಲ್ಲಾ ಸರ್ಕಾರ ಶಾಲೆಯ ಮಕ್ಕಳು ಗ್ರಾಮ ಪಂಚಾಯತಿ ವತಿಯಿಂದ ವಿವಿಧ ಸ್ಪರ್ಧೆಯನ್ನು ಏರ್ಪಡಿಸಿ ವಿಜೇತರಾದವರಿಗೆ ಕಫ್, ಮಾಡೆಲ್ ಬಹುಮಾನ ವಿತರಿಸಲಾಯಿತು.

ಕಾರ್ಮಿಕ ಇಲಾಖೆಯ ಶ್ರೀಧರ್ ಅವರು ಮಾತನಾಡಿ ಬಾಲಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ 1986 (ತಿದ್ದುಪಡಿ 2016) ರಂತೆ 14 ವರ್ಷದೊಳಗಿನ ಮಕ್ಕಳನ್ನು ಯಾವುದೇ ಕ್ಷೇತ್ರದಲ್ಲಿ ಹಾಗೂ 15 ರಿಂದ 18 ವರ್ಷದೊಳಗಿನ ಮಕ್ಕಳನ್ನು ಅಪಾಯಕಾರಿ ಕ್ಷೇತ್ರದಲ್ಲಿ ದುಡಿಸಿದಲ್ಲಿ 2 ವರ್ಷ ಜೈಲು, 50,000 ದಂಡ. ವಿಧಿಸಲಾಗುವುದು ಎಂದರು.

ಬಾಲಕರ ಶಾಲೆಯ ಮುಖ್ಯಗುರುಗಳಾದ ಷಣ್ಮುಖ ಹೂಗಾರ ಮಾತನಾಡಿ ಮಕ್ಕಳ ಹಕ್ಕುಗಳ ಬಗ್ಗೆ ಮಕ್ಕಳ ರಕ್ಷಣೆಯ ಕುರಿತು ಮಾಹಿತಿ ತಿಳಿಸಿದ್ದರು, ಸಮಾಜ ಮತ್ತು ಸರಕಾರದ ಕರ್ತವ್ಯಗಳ ಬಗ್ಗೆ ವಿವರಿಸಿದರು,

ಮಕ್ಕಳಿಗೆ ಸ್ವಚ್ಛತೆಯ ಬಗ್ಗೆ ಮತ್ತು ಪರಿಸರದ ಕಾಳಜಿಯ ಬಗ್ಗೆ ತಿಳಿಸಿದ್ದರು. ಮಕ್ಕಳ ಶೈಕ್ಷಣಿಕ ಪ್ರಗತಿ, ಮಕ್ಕಳ ಹಕ್ಕು ಕಾಯ್ದೆಗಳ ಬಗ್ಗೆ ತಿಳಿಸಿದರು,

ವೇದಿಕೆ ಮೇಲೆ ವಿದ್ಯಾರ್ಥಿ ಪ್ರತಿನಿಧಿ ಶರಣಬಸಪ 8ನೇ ತರಗತಿ, ಮತ್ತು ಗಬ್ಬೂರು ಕಾರ್ಕ್ ವಿದ್ಯಾರ್ಥಿ ಪ್ರತಿನಿಧಿ ಕುಮಾರಿ. ಶಕುಂತಲಾ 9ನೇ ತರಗತಿ ಮಾತನಾಡಿ ಶಾಲೆಯ ಸರ್ವತೋಮುಖ ಅಭಿವೃದ್ಧಿಯ ಬಗ್ಗೆ ಹಾಗೂ ಎಲ್ಲಾ ಸಮಸ್ಯೆಗಳ ಬಗ್ಗೆ ಧ್ವನಿ ಎತ್ತಿ ಕೆಲವೊಂದು ಸಮಸ್ಯೆ ಪರಿಹಾರಿಸಿಕೊಂಡಳು, ನಾನು ಇಷ್ಟು ಧೈರ್ಯವಾಗಿ ಮಾತನಾಡಲು ಕಾರಣ ಕ್ರೈ ಸಂಸ್ಥೆಯ ಕಾರ್ಕ್ ಸೆಂಟರ್ ನಿಂದ ನಾನು ಈ ವೇದಿಕೆ ಮೂಲಕ ಕ್ರೈ ಸಂಸ್ಥೆಗೆ ಧನ್ಯವಾದಗಳು ತಿಳಿಸುತ್ತೇನೆ.

ವೇದಿಕೆ ಮೇಲೆ ಮುಖ್ಯ ಅತಿಥಿಯಾಗಿ ಗ್ರಾ.ಪಂ ಅಧ್ಯಕ್ಷರಾದ ಪಾರ್ವತಿ ಗಂಡ ಬುಸ್ಸಪ್ಪ, ಬಾಲಕರ ಶಾಲೆಯ ಎಸ್.ಡಿ.ಎಂ.ಸಿ ಅಧ್ಯಕ್ಷರಾದ ಬಸನಗೌಡ ರಾಮನೋರ್, ಪ್ರೌಢಶಾಲೆಯ ಎಸ್.ಡಿ.ಎಂ.ಸಿ ಅಧ್ಯಕ್ಷರಾದ ಶಾಂತಪ್ಪ, ಆರ್.ಡಿ.ಪಿ.ಆರ್ ಅಧಿಕಾರಿಗಳಾದ ಪಂಪಾಪತಿ, ಪ್ರೌಢಶಾಲೆಯ ಮುಖ್ಯಗುರುಗಳಾದ ಹೊನ್ನಕೇರಪ್ಪ, ಪೊಲೀಸ್ ಇಲಾಖೆಯ ಅಧಿಕಾರಿಗಳಾದ ಬಂದಯ್ಯ ಸ್ವಾಮಿ, ಕ್ರೈ ಸಂಸ್ಥೆಯ ಸಂಯೋಜಕರಾದ ಮಲ್ಲಯ್ಯ ಖಾನಾಪೂರ, ಸಮಾಜಿಕ ಹೋರಾಟಗಾರರಾದ ರಾಜಪ್ಪ ಸಿರವಾರಕರ್, ಶ್ರೀಮಂತ, ಬಸವಲಿಂಗಪ್ಪ ಕರೆಗಾರ ಶಿಕ್ಷಕರು ಕಾರ್ಯಕ್ರಮದ ನಿರೂಪಣೆಯನ್ನು ಮಾಡಿದರು.

ಈ ಸಂದರ್ಭದಲ್ಲಿ ವಿವಿಧ ಶಾಲೆಯ ಶಿಕ್ಷಕರು, ವಿವಿಧ ಶಾಲೆಯ ಮಕ್ಕಳು ಸೇರಿದಂತೆ ಅನೇಕರು ಇದ್ದರು.

# ಬಾಲ್ಯ ವಿವಾಹ ಪದ್ಧತಿ ನಿರ್ಮೂಲನೆ ಕಾರ್ಯಕ್ಕೆ ಸರ್ವರೂ ಕೈಜೋಡಿಸಬೇಕು

ಮಾತನಾಡಿದರು. ಸಂಪನ್ಮೂಲ ವ್ಯಕ್ತಿ ರಾಜೇಂದ್ರ ಅವರು ಮಕ್ಕಳ ರಕ್ಷಣಾ ಕಾನೂನುಗಳ ಕುರಿತು ಉಪನ್ಯಾಸ ನೀಡಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ವಿಕಲಚೇತನರ ಕಲ್ಯಾಣ ಇಲಾಖೆಯ ಅಧಿಕಾರಿ ಶ್ರೀದೇವಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ ಶರಣಮ್ಮ ಕಾರನೂರು, ಮಾಣಿಕ ಪ್ರಭು ಅಂಧಮಕ್ಕಳ ಶಾಲೆಯ ಮುಖ್ಯ ಗುರುಗಳಾದ ಆರ್.ಎಂ ಯತ್ನಳ್ಳಿ, ರಕ್ಷಣಾಧಿಕಾರಿ ಹನುಮೇಶ, ಮಕ್ಕಳ ಸಹಾಯವಾಣಿ ಸಂಯೋಜಕ ಮೋಹನ್ ಕುಮಾರ್, ರಮೇಶ್ ಅವರು ಇದ್ದರು.

ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಿಬ್ಬಂದಿ ತಿಕ್ಕಯ್ಯ ಅವರು ನಿರೂಪಿಸಿದರು. ರಕ್ಷಣಾಧಿಕಾರಿ ಅಸಾಂಸ್ಥಿಕ ಕಿರಿಲಿಂಗಪ್ಪ ಅವರು ಸ್ವಾಗತಿಸಿದರು. ಕಾನೂನು ಪರಿವೀಕ್ಷಣಾಧಿಕಾರಿ ಶಿವರಾಜ್ ಪಾಟೀಲ್ ಅವರು ವಂದಿಸಿದರು. ಹಾಗೂ ಇತರ ಸಿಬ್ಬಂದಿ ಹಾಜರಿದ್ದರು.

## ಜಿಲ್ಲಾಧಿಕಾರಿಗಳು, ಪಾಲಿಕೆ ಆಯುಕ್ತರ ನಿರ್ದೇಶನ ರಾಯಚೂರು ಸಿಟಿಯ ಹೋಟೆಲ್, ರೆಸ್ಟೋರೆಂಟ್‌ಗಳ ಮೇಲೆ ಮುಂದುವರೆದ ದಾಳಿ: ಆಹಾರದ ಗುಣಮಟ್ಟ, ಶುಚಿತ್ವ ಪರಿಶೀಲನೆ

ಉಪ್ಪಿನ ಗುಣಮಟ್ಟದ ಪ್ರಮಾಣವನ್ನು ಪರಿಶೀಲಿಸಿದರು. ಕೆಲ ಹೋಟೆಲ್‌ಗಳಲ್ಲಿ ಹಾಕಿದ್ದ ಉಪಹಾರ ಮತ್ತು ಊಟದ ದರಪಟ್ಟಿಯ ಬಗ್ಗೆ ಸಹ ಪರಿಶೀಲನೆ ಮಾಡಿದರು.

ಈ ವೇಳೆ ರಾಯಚೂರು ವಿಭಾಗದ ಸಹಾಯಕ ಆಯುಕ್ತರು ಮಾತನಾಡಿ, ಆಹಾರ ಸುರಕ್ಷತೆ ಮತ್ತು ಮಾನದಂಡಗಳ ಕಾಯ್ದೆ 2006ರ ಹಾಗೂ ಆಹಾರ ಸುರಕ್ಷತೆ ಮತ್ತು ಮಾನದಂಡಗಳ ನಿಯಮಗಳು 2011ರ ಸೂಚನೆಗಳನ್ನು ಕಡ್ಡಾಯ ಅನುಸರಿಸಬೇಕು. ಈ ಸುಧಾರಣಾ ಸೂಚನೆಗಳನ್ನು ಅನುಸರಿಸಲು ವಿಫಲವಾದರೆ ಹೊಟೆಲ್ ರೆಸ್ಟೊರೆಂಟಗಳ ಪರವಾನಿಗೆಯನ್ನು ಅಮಾನತುಗೊಳಿಸಿ ಕಾನೂನು ಕ್ರಮಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

## ನನಗೆ ರಾಜಕೀಯ ನಿಶ್ಶಕ್ತಿ ಇಲ್ಲ : ವಿಪಕ್ಷಗಳಿಗೆ ಸಿಎಂ ಸಿದ್ದು ತಿರುಗೇಟು

ಕೂರಬೇಕಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ಜನರೇ ಮಾಲೀಕರು. ಅವರು ಹೇಳಿದಂತೆ ಕೇಳಬೇಕು. ನಮ್ಮ ಸಿದ್ಧಾಂತಗಳು ಏನೇ ಇದ್ದರೂ ಅಂತಿಮ ತೀರ್ಮಾನ ನೀಡುವುದು ಜನರು ಎಂದು ಹೇಳಿದರು.ರಾಜಕೀಯವಾಗಿ ನಿಶ್ಶಕ್ತಿ ಎಂಬ ಪದ ನನ್ನ ಬಳಿ ಇಲ್ಲವೇ ಇಲ್ಲ. ರಾಜಕೀಯವಾಗಿ ನನ್ನ ಬಳಿ ಯಾವಾಗಲೂ ನಿಶ್ಶಕ್ತಿ ಇಲ್ಲ, ಈಗಲೂ ಇಲ್ಲ ಮುಂದೆಯೂ ಇರುವುದಿಲ್ಲ ಇಂತಹ ತಪ್ಪು ತಿಳಿವಳಿಕೆಗಳು ವಿರೋಧ ಪಕ್ಷಗಳಿಗೆ ಬೇಡ ಎಂದರು.

ಬಿಜೆಪಿಯ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್, ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಅವರೇ 5 ವರ್ಷ ಅಧಿಕಾರ ಪೂರ್ಣಗೊಳಿಸುತ್ತಾರೋ ಅಥವಾ ಇಂದು ಎಲ್ಲರಿಗೂ ಧನ್ಯವಾದ ಹೇಳುವುದನ್ನು ನೋಡಿದರೆ ವಿದಾಯ ಹೇಳುತ್ತಿದ್ದಾರೆಯೋ ? ಎಂಬ ಸಂಶಯ ಬರುತ್ತದೆ ಎಂದರು.ಯತ್ನಾಳ್ ಅವರಿಗೆ ಏನೇನೋ ಸಂಶಯವಿರುತ್ತದೆ. ಅದಕ್ಕೇ ಅವರನ್ನು ಪಕ್ಷದಿಂದ ಹೊರ ಹಾಕಿದ್ದಾರೆ ಎಂದು ಸಿದ್ದರಾಮಯ್ಯ ಛೇಡಿಸಿದರು. ಯತ್ನಾಳ್ ಧ್ವನಿಗೂಡಿಸಿ ನನ್ನನ್ನು ಹೊರ ಹಾಕಿದ್ದಾರೆ. ನಿಮನ್ನೂ ಹೊರ ಹಾಕಿದ್ದಾರೆ. ಆ ಬಗ್ಗೆ ಚರ್ಚೆ ಮಾಡುವುದೇ ಬೇಡ. ನಿಮನ್ನು ಕುತಂತ್ರದಿಂದ ಹೊರಹಾಕಿದ್ದರು. ಅದಕ್ಕೆ ನೀವು ಮುಖ್ಯಮಂತ್ರಿ ಆಗಿದ್ದೀರಾ. ರಾಜಕೀಯದಲ್ಲಿ ಇಂಥದ್ದೆಲ್ಲ ಇದ್ದೇ ಇರುತ್ತದೆ ಎಂದ ಹೇಳಿದರು.

ಯತ್ನಾಳ್ ಅವರಿಗೆ ಯಾವುದೇ ಸಂಶಯ ಬೇಡ ಎಂದು ಸಿದ್ದರಾಮಯ್ಯ ಹೇಳಿದಾಗ, ಹಾಗಿದ್ದರೆ ಸಿದ್ದರಾಂಯ್ಯ ಐದು ವರ್ಷ ಮುಖ್ಯಮಂತ್ರಿಯಾಗಿರುತ್ತಾರೆ ಎಂಬ ಸಂದೇಶ ಇಂದು ರವಾನೆಯಾದಂತಾಯಿತು ಎಂದು ಯತ್ನಾಳ್ ಹೇಳುವ ಮೂಲಕ ರಾಜಕೀಯ ಚರ್ಚೆಗೆ ತೆರೆ ಎಳೆದರು.ಅಧಿಕಾರ ಹಂಚಿಕೆಯ ಗೊಂದಲಗಳ ನಡುವೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಈ ಹೇಳಿಕೆ ನಾನಾ ರೀತಿಯ ವ್ಯಾಖ್ಯಾನಗಳಿಗೂ ಕಾರಣವಾಗಿದೆ.

# ರಾಷ್ಟ್ರೀಯ ಸೇವಾಯೋಜನೆ ಘಟಕದಿಂದ ಆರೋಗ್ಯ ಜಾಗೃತಿ ಜಾಥ




ಯುವಮಾರ್ಗ ಸುದ್ದಿ

**ಮಾನ್ವಿ:** ಪಟ್ಟಣದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರೌಢ ಶಾಲಾ ವಿಭಾಗದ ರಾಷ್ಟ್ರೀಯ ಸೇವಾಯೋಜನೆ ಘಟಕ ಹಾಗೂ ನಂದಿ ಫೌಂಡೇಶನ್ ವತಿಯಿಂದ ನಡೆದ ಉಚಿತ ಆರೋಗ್ಯ ಮೇಳದ ಜಾಗೃತಿ ಜಾಥಾ ಅಂಗವಾಗಿ ಕಾಲೇಜಿನ ವಿದ್ಯಾರ್ಥಿಗಳು ಪಟ್ಟಣದ ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ಭೇಟಿ ನೀಡಿ ಮಹಿಳೆಯರಿಗೆ ಆಸ್ಪತ್ರೆಯಲ್ಲಿ ದೊರೆಯುವ ಆರೋಗ್ಯ ಸೌಲಭ್ಯಗಳ ಬಗ್ಗೆ ಹಾಗೂ ಬಾಲಕಿಯರ ಆರೋಗ್ಯ ಕುರಿತು ತಜ್ಞ ವೈದ್ಯರಿಂದ ಮಾಹಿತಿ ಪಡೆದರು.

ಪಟ್ಟಣದ ಪ್ರಮುಖ ಬೀದಿಗಳಲ್ಲಿ ನೂರಾರು ವಿದ್ಯಾರ್ಥಿನಿಯರಿಂದ ಆರೋಗ್ಯ ಜಾಗೃತಿ ಜಾಥ ನಡೆಯಿತು.

ರಾಷ್ಟ್ರೀಯ ಸೇವಾಯೋಜನೆ ಘಟಕದ ಕಾರ್ಯಕ್ರಮಾಧಿಕಾರಿ ಜಯಭೀಮ ಬಾವಿಕಟ್ಟಿ ಹಾಗೂ ಉಪನ್ಯಾಸಕರಾದ ಮಧುಶ್ರೀ ,ನಿರ್ಮಾಲ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ವೈದ್ಯರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದರು.

# ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾ ಸಮಿತಿಯ ಪದಾಧಿಕಾರಿಗಳ ನೇಮಕ

ಯುವಮಾರ್ಗ ಸುದ್ದಿ



**ದೇವದುರ್ಗ,ಡಿ.19–** ವೀರಗೋಟದಲ್ಲಿ ನಡೆದ ಪದಗ್ರಹಣ ಕಾರ್ಯಕ್ರಮದಲ್ಲಿ ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾ ಸಮಿತಿಯ ಜಿಲ್ಲಾಧ್ಯಕ್ಷರಾದ ರವಿ ನಾಯಕ ಮಾಕಾಪುರ ಹಾಗೂ ಜಿಲ್ಲಾ ಕಾರ್ಯಧ್ಯಕ್ಷರಾದ ಶಿವರಾಯ ನಾಯಕ ಯಮನಾಳ ರವರ ನೇತೃತ್ವದಲ್ಲಿ ವೀರಗೊಟ ಮೌನೇಶ್ವರ ದೇವಸ್ಥಾನದಲ್ಲಿ ಜರುಗಿತು. ಈ ಸಂದರ್ಭದಲ್ಲಿ ಜಿಲ್ಲಾ ಗೌರವ ಸಲಹೆಗಾರರನ್ನಾಗಿ ನರಸಣ್ಣ ವಿ ಚಂಪಾ ನಾಯಕ ಜಿಲ್ಲೆಯ ಉಪಾಧ್ಯಕ್ಷರಾಗಿ ಶಿವರಾಜ ನಾಯಕ ಗೌಡುರು ಮಸ್ಕಿ ತಾಲೂಕ ಅಧ್ಯಕ್ಷರಾಗಿ ಶರಣಪ್ಪ ನಾಯಕ ನಾಗರಾಳ ಸಿಂಧನೂರು ತಾಲೂಕ ಅಧ್ಯಕ್ಷರಾಗಿ ರವೀಂದ್ರ ನಾಯಕ ದುಮತಿ ಲಿಂಗಸುಗೂರು ತಾಲೂಕ ಅಧ್ಯಕ್ಷರಾಗಿ ರಮೇಶ್ ನಾಯಕ ರವರನ್ನು ನೇಮಿಸಿ ಆದೇಶ ಪ್ರತಿಗಳನ್ನು ನೀಡಲಾಯಿತು. ಸಮಾಜದ ಅಭಿವೃದ್ಧಿಗೆ ದೀನ ದಲಿತರ ನೆರವಿಗೆ ಧಾವಿಸಿ ನ್ಯಾಯ ಒದಗಿಸಲು ನಿರಂತರವಾಗಿ ಕಾರ್ಯ ನಿರ್ವಹಿಸಬೇಕೆಂದು ಜಿಲ್ಲಾಧ್ಯಕ್ಷರು ಸಲಹೆ ನೀಡಿದರು.

# ಡಿ. 22 ಕ್ಕೆ ಲೋಕಸಭಾ ಸದಸ್ಯರ ಮನೆ ಮುಂದೆ ಪ್ರತಿಭಟನೆ




**ಬಳ್ಳಾರಿ,ಡಿ.19–** ಈ ಹಿಂದೆ ಇದ್ದ ಸ್ವರೂಪದಲ್ಲಿಯೇ ಮನರೇಗ ಯೋಜನೆ ಮುಂದುವರೆಸಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಲು, ಹಾಗೂ ಕೇಂದ್ರ ಸರ್ಕಾರ ಬದಲಿಸಲು ಹೊರಟಿರುವ ಮನರೇಗಾ ಯೋಜನೆಯ ಸ್ವರೂಪವನ್ನು ವಿರೋಧಿಸಿ ಈ ತಿಂಗಳ 22 ರಂದು ಲೋಕಸಭಾ ಸದಸ್ಯರ ಮನೆ ಮುಂದೆ ಪ್ರತಿಭಟನೆ ನಡೆಸಲಿದೆಂದು ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆ ಹೇಳಿದೆ

ಸಂಘಟನೆಯ ಜಿಲ್ಲಾ ಸಂಚಾಲಕಿ ಎಸ್. ಅಕ್ಕಮಹಾದೇವಿ ಮರಬ್ಬೀಹಾಳ್ ಇಂದು ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ. ಕೇಂದ್ರ ಸರ್ಕಾರದ ಪ್ರಸ್ತಾವಿತ ವಿಕಸಿತ ಭಾರತ  ರೋಜಗಾರ ಮತ್ತು ಅಜೀವಿಕಾ ಮಿಷನ್ (ಗ್ರಾಮೀಣ) 2025 ಮಸೂದೆಯನ್ನು ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆ ವಿರೋಧಿಸುತ್ತಿದೆ. ಕಾರ್ಮಿಕರು ಮತ್ತು ಯಾವುದೆ ಕಾರ್ಮಿಕ ಗುಂಪುಗಳ ಜೊತೆ ಸಮಾಲೋಚನೆ ನಡೆಸದೆ ಈ ಮಸೂದ ಯನ್ನು ರಚಿಸಿದೆ. ಈ ಮಸೂದೆ ಮನರೇಗವ ನ್ನು ಪೂರ್ಣ ಪ್ರಮಾಣದಲ್ಲಿ ಕಿತ್ತೊಗೆಯುವ ಹುನ್ನಾರವಾಗಿದೆ. ಉದ್ಯೋಗ ಖಾತ್ರಿಯನ್ನು ಕೇಂದ್ರ ಸರಕಾರದ ಬಿಗಿ ಮುಷ್ಟಿಯಿಂದ ಕೇಂದ್ರಿಕೃತ, ವಿವೇಚನಾಯುಕ್ತ. ಬಜೆಟ್ ನ್ನು ನಿಯಂತ್ರಿಸುವ ಯೋಜನೆಯನ್ನಾಗಿ ಬದಲಾಯಿಸಲು ಹೊರಟಿದೆ. ಬಡವರ ಉದ್ಯೋಗದ ಹಕ್ಕನ್ನು ಕಸಿದುಕೊಳ್ಳುವ ಪ್ರಯತ್ನ ಇದಾಗಿದೆ. ಇದು ಬಡವರ ಪರ ಅಲ್ಲ ಕಾಯ್ದೆ ಸ್ವರೂಪ ಇದ್ದ ನರೇಗಾವನ್ನು ಯೋಜನೆಯ ಸ್ವರೂಪ ಮಾಡಿದೆ. ಇದರಲ್ಲಿ ಅವರದ್ದೇ ನಿಯಮಗಳು ಇರಲಿವೆ.

ಕೆಲಸ ಬೇಕಾದಾಗ ಜನತೆಗೆ ಕೆಲಸ ಕೊಡಬೇಕಿತ್ತು ಕೊಡದಿದ್ದರೆ ಕಾಯ್ದೆಯಡಿ ಹೋರಾಟ ಮಾಡಬಹುದಿತ್ತು.ಆ ಹಕ್ಕನ್ನು ಇ8 ನೂತನ ಮಸೂದೆ ಕಸಿದುಕೊಳ್ಳಲಿದೆ. ಈಗಲೇ ನೂರು ದಿನ ಕೆಲಸ ಸರಿಯಾಗಿಕೊಡುತ್ತಿಲ್ಲ. ಇನ್ನು 125 ದಿನದ ಮಾತೆಲ್ಲಿ. ನಮಗೆ ಈ ಹಿಂದಿನಂತೆ ಕಾಯ್ದೆ ಇರಲಿ ಯೋಜನೆ ಬೇಡ.

ಅದಕ್ಕಾಗಿ ಈ ಹಿಂದಿನ ಸ್ವರೂಪದಲ್ಲಿಯೇ ಉದ್ಯೋಗ ಖಾತ್ರಿ ಯೋಜನೆ ಇರಬೇಕೆಂದು ಡಿ 22 ರಂದು ಎಂಪಿ ಮನೆಗಳಮುಂದೆ ಪ್ರತಿಭಟನೆ ಮಾಡಲಿದೆಂದು ತಿಳಿಸಿದರು.

## ರೈಸಿಂಗ್ ಸನ್ ಪಬ್ಲಿಕ್ ಸ್ಕೂಲ್ ವತಿಯಿಂದ ವಸ್ತು ಪ್ರದರ್ಶನ



ಯುವಮಾರ್ಗ ಸುದ್ದಿ

**ಮಾನ್ವಿ,ಡಿ.19–** ಪಟ್ಟಣದ ರೈಸಿಂಗ್ ಸನ್ ಪಬ್ಲಿಕ್ ಸ್ಕೂಲ್ ಹಾಗೂ ರೈಸಿಂಗ್ ಸನ್ ಕಿಂಡರ್ ಗಾರ್ಟನ್ ಆವರಣದಲ್ಲಿ ಶಾಲೆಯ ವಿದ್ಯಾರ್ಥಿಗಳಿಂದ ನಡೆದ ವಸ್ತು ಪ್ರದರ್ಶನ ಕಾರ್ಯಕ್ರಮವನ್ನು ಪುರಸಭೆ ಹಿರಿಯ ಸದಸ್ಯರಾದ ಲಕ್ಷ್ಮಿ ??ದೇವಿ ನಾಯಕ ರವರು ಉದ್ಘಾಟಿಸಿ ಮಾತನಾಡಿ ಮಕ್ಕಳಲ್ಲಿನ ಪ್ರತಿಭೆ ಹಾಗೂ ಕೌಶಲ್ಯವನ್ನು ಗುರುತಿಸಿದಾಗ ಮಾತ್ರ ವಿದ್ಯಾರ್ಥಿಗಳು ಹೆಚ್ಚಿನ ಸಾಧನೆಯನ್ನು ತೋರುವುದಕ್ಕೆ ಸಾಧ್ಯವಾಗುತ್ತದೆ ವಸ್ತು ಪ್ರದರ್ಶನ ಕಾರ್ಯಕ್ರಮಗಳಿಂದ ಶಾಲೆಯ ಮಕ್ಕಳ ಹಾಗೂ ಶಿಕ್ಷಕರ ನಡುವೆ ಉತ್ತಮ ಭಾಂದವ್ಯ ಬೆಳೆಯುತ್ತದೆ ,ಮತ್ತು ಪಾಲಕರಿಗೆ ಕೂಡ ತಮ್ಮ ಮಕ್ಕಳಲ್ಲಿನ ಕೌಶಲ್ಯವನ್ನು ತಿಳಿಯುವುದಕ್ಕೆ ಉತ್ತಮವಾದ ವೇದಿಕೆಯಾಗುತ್ತದೆ ಎಂದು ತಿಳಿಸಿದರು.

ಶಾಲೆಯ ವಿದ್ಯಾರ್ಥಿಗಳು ವಿಜ್ಞಾನ,ಕೃಷಿ, ಆರೋಗ್ಯ, ಮಾನವ ಅಂಗಗಳು, ಜನಜೀವನ, ಪರಿಸರ,ಗ್ರಾಮೀಣ ಭಾಗದ ಹಳ್ಳಿ ಸೋಗಡಿನ ವಾತಾವರಣವನ್ನು ನೆನಪಿಸುವ ವಿವಿಧ ಮಾದರಿಗಳನ್ನು ಪ್ರದರ್ಶಿಸಿ ಪಾಲಕರಿಗೆ ಅಗತ್ಯ ಮಾಹಿತಿಯನ್ನು ನೀಡುವ ಮೂಲಕ ಗಮನವನ್ನು ಸೇಳೆದರು.

ಶಾಲೆಯ ವ್ಯವಸ್ಥಪಕರಾದ ಹೆನ್ನ ಆಜಮೀರ್, ಪುರಸಭೆ ಸದಸ್ಯರಾದ ಶೇಖ ಫರೀದ್ ಉಮ್ರಿ, ಮುಖಂಡರಾದ ಎಂ.ಎ.ಮುಖೀಮ್, ಶಾಲೆಯ ಶಿಕ್ಷಕರಾದ ಸುಮಲಾತಾ,ಅಕ್ಷರ, ಅಲೋಟೋ,ಶಬಾನಾ,ಝ್ಟುಮಿಂಗ್,ಸ್ಟುತೋಯ್ಸ್,ಸುಕಾನ್ಯ,ಸಾ,ಆಯೋಶ, ಪಾಲಕರಾದ ಶಬೀನಾ, ನವಿಕಾ, ಶಕೇರ ಸೇರಿದಂತೆ ಇನ್ನಿತರರು ಇದ್ದರು.

# ಸಂಸತ್‌ನಲ್ಲಿ ಜಿ ರಾಮ್ ಜಿ ಮಸೂದೆ ಅಂಗೀಕಾರ



**ನವದೆಹಲಿ, ಡಿ.19–** ದೇಶದಲ್ಲಿ ಎರಡು ದಶಕಗಳಷ್ಟು ಹಳೆಯದಾದ ಮನ್ರೇಗಾ ಹೆಸರನ್ನು ಜಿ ರಾಮ್ ಜಿ ಎಂದು ಹೆಸರು ಬದಲಾಯಿಸುವ ಮಸೂದೆಗೆ ವಿರೋಧ ಪಕ್ಷಗಳ ತೀವ್ರ ವಿರೋದದ ನಡುವೆಯೂ ಸಂಸತ್ತಿನಲ್ಲಿ ಅಂಗೀಕಾರಗೊಂಡಿದೆ.

ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ– ಮನ್ರೇಗಾ ಇನ್ನು ಮುಂದೆ ಉದ್ಯೋಗ ಮತ್ತು ಜೀವನೋಪಾಯ ಮಿಷನ್ ಗ್ರಾಮೀಣ ಮಸೂದೆ – ಜಿ ರಾಮ್ ಜಿ ಎಂದು ಕರೆಯಲು ಸಂಸತ್ತಿನ ಉಭಯ ಸದನಗಳಲ್ಲಿ ಅಂಗೀಕಾರ ಸಿಕ್ಕಿದೆ.

100 ದಿನಗಳ ಮಾನವ ದಿನಗಳ ಬದಲಿಗೆ ವಾರ್ಷಿಕವಾಗಿ 125 ದಿನಗಳ ಗ್ರಾಮೀಣ ಕೂಲಿ ಉದ್ಯೋಗದ ಭರವಸೆ ನೀಡುವ ಜಿ ರಾಮ್ ಜಿ ಮೂಲಕ ಉದ್ಯೋಗ ಕಲ್ಪಿಸುವ ಭರವಸೆಯನ್ನು ಕೇಂದ್ರ ಸರ್ಕಾರ ನೀಡಿದೆ. ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಮಾತನಾಡಿ, ಅಸ್ತಿತ್ವದಲ್ಲಿರುವ ಯೋಜನೆಯಲ್ಲಿನ ರಚನಾತ್ಮಕ ದೋಷಗಳನ್ನು ಸರಿಪಡಿಸುವ ಗುರಿ ಹಿನ್ನೆಲೆಯಲ್ಲಿ ಈ ಪರಿಷ್ಕರಣೆ ಮಾಡಲಾಗಿದೆ ಎಂದಿದ್ದಾರೆ.

ಲೋಕಸಭೆಯಲ್ಲಿ ಮಸೂದೆ ಅಂಗೀಕಾರವಾದ ಕೆಲವೇ ಗಂಟೆಗಳ ನಂತರ ಮಧ್ಯರಾತ್ರಿ ಚರ್ಚೆಯ ನಂತರ ರಾಜ್ಯಸಭೆಯಲ್ಲಿ ಧ್ವನಿಮತದ ಮೂಲಕ ಮಸೂದೆ ಅಂಗೀಕರವಾಗಿದೆ.ಮಹಾತ್ಮಾ ಗಾಂಧಿಯವರ ಹೆಸರನ್ನು ಮನ್ರೇಗಾದಿಂದ ಕೈಬಿಟ್ಟಿದ್ದನ್ನು ಪ್ರತಿಭಟಿಸಿದ ವಿರೋಧ ಪಕ್ಷಗಳು, ಕೇಂದ್ರದ ಯೋಜನೆಯ ಆರ್ಥಿಕ ಹೊರೆಯನ್ನು ರಾಜ್ಯಗಳ ಮೇಲೆ ವರ್ಗಾಯಿಸುತ್ತಿದೆ ಎಂದು ಆರೋಪಿಸಿವೆ.

ರಾಜ್ಯಸಭೆಯಲ್ಲಿ ಪ್ರತಿಭಟನಾ ನಿರತ ಸದಸ್ಯರು ಮಸೂದೆಯನ್ನು ಹಿಂಪಡೆಯುವಂತೆ ಒತ್ತಾಯಿಸಿದರು, ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು ಮತ್ತು ಶಾಸನದ ಪ್ರತಿಗಳನ್ನು ಹರಿದು ಹಾಕಿದರು. ಮಸೂದೆ ಅಂಗೀಕಾರದ ಸಮಯದಲ್ಲಿ ಹಲವಾರು ವಿರೋಧ ಪಕ್ಷದ ಸಂಸದರು ಸಭಾತ್ಯಾಗ ಮಾಡಿದರು, ಇದರಿಂದಾಗಿ ಸಭಾಪತಿ ಸಿ.ಪಿ. ರಾಧಾಕೃಷ್ಣನ್ ಅವರು ತಮ್ಮ ತಮ್ಮ ಸ್ಥಾನಗಳಿಗೆ ತೆರಳುವಂತೆ ಸದಸ್ಯರಿಗೆ ಎಚ್ಚರಿಕೆ ನೀಡಿದರೂ ಪ್ರತಿಭಟನೆ ಮುಂದುವರಿದಿತ್ತು.

ವಿಪಕ್ಷಗಳಿಂದ ದೇಶಾದ್ಯಂತ ಹೋರಾಟ

ಮಸೂದೆ ಅಂಗೀಕಾರದ ನಂತರ, ವಿರೋಧ ಪಕ್ಷಗಳು ಸಂಸತ್ತಿನ ಸಂಕೀರ್ಣದಲ್ಲಿರುವ ಸಂವಿಧಾನ್ ಸದನದ ಹೊರಗೆ ಧರಣಿ ನಡೆಸಿದವು, ಈ ಶಾಸನ ಗ್ರಾಮೀಣ ಆರ್ಥಿಕತೆಯನ್ನು ದುರ್ಬಲಗೊಳಿಸಿದೆ ಎಂದು ಆರೋಪಿಸಿ ಮತ್ತು ರಾಷ್ಟ್ರವ್ಯಾಪಿ ಆಂದೋಲನ ನಡೆಸುವುದಾಗಿ ಎಚ್ಚರಿಸಿವೆ

.ತೃಣಮೂಲ ಕಾಂಗ್ರೆಸ್ ಸಂಸದರು ಸಂವಿಧಾನ್ ಸದನದ ಮೆಟ್ಟಿಲುಗಳ ಮೇಲೆ 12 ಗಂಟೆಗಳ ಕಾಲ ಪ್ರತಿಭಟನೆ ನಡೆಸಲು ನಿರ್ಧರಿಸಿದ್ದಾರೆ. ಜೊತೆಗೆ ವಿರೋದ ಪಕ್ಷಗಳು ಒಟ್ಟಾಗಿ ಕೇಂದ್ರ ಸರ್ಕಾರದ ವಿರುದ್ಧ ಹೋರಾಟ ನಡೆಸಲು ಮುಂದಾಗಿವೆ.

# ವಿಮಾನ ದುರಂತ ಹಲವರ ಸಾವು

**ವಾಷಿಂಗ್ಟನ್, ಡಿ.19–** ಅಮೆರಿಕಾದಲ್ಲಿ ಮತ್ತೊಂದು ವಿಮಾನ ದುರಂತ ಸಂಭವಿಸಿದ್ದು, ಉತ್ತರ ಕೆರೊಲಿನಾದ ಇರೆಡೆಲ್ ಕೌಂಟಿಯಲ್ಲಿ ವಿಮಾನ ಅಪಘಾತಕ್ಕೀಡಾಗಿ ಹಲವಾರು ಜನರು ಸಾವನ್ನಪ್ಪಿದ್ದಾರೆ.

ಈ ವಿಮಾನ ದುರ್ಘಟನೆಯನ್ನು ಮೊದಲು ಸ್ಟೇಟ್ಸ್‌ವಿಲ್ಲೆ ಪ್ರಾದೇಶಿಕ ವಿಮಾನ ನಿಲ್ದಾಣ ವರದಿ ಮಾಡಿದೆ. "ಸುಮಾರು ಬೆಳಿಗ್ಗೆ 10:15 ಕ್ಕೆ, ವಿಮಾನವು ಇಳಿಯುವಾಗ ಅಪಘಾತಕ್ಕೀಡಾಗಿದೆ. ಫೆಡರಲ್ ವಿಮಾನಯಾನ ಆಡಳಿತ ಮಂಡಳಿ ಘಟನೆಯ ಬಗ್ಗೆ ತನಿಖೆ ನಡೆಸುತ್ತದೆ ಎಂದು ಹೇಳಿದೆ.



ವರದಿಗಳ ಪ್ರಕಾರ, ವಿಮಾನದಲ್ಲಿದ್ದ ಎಲ್ಲಾ 7 ಜನರನ್ನು ಗುರುತಿಸಲಾಗಿದೆ. ಇದರಲ್ಲಿ ಮಾಜಿ ನಾಸ್ಕರ್ ಚಾಲಕ ಗ್ರೆಗ್ ಬಿಫಲ್ (55), ಅವರ ಪತ್ನಿ ಕ್ರಿಸ್ಟಿನಾ ಗ್ರಾಸು ಬಿಫಲ್, ಅವರ ಮಗ ರೈಡರ್ ಮತ್ತು ಬಿಫಲ್ ಅವರ ಮಗಳು ಎಮ್ಮಾ ಸೇರಿದ್ದಾರೆ. ಇತರ ಮೂವರನ್ನು ಕ್ರೇಗ್ ವಾಡ್ಸ್ ವರ್ತ್, ಡೆನ್ನಿಸ್ ಡಟ್ಟನ್ ಮತ್ತು ಡಟ್ಟನ್ ಅವರ ಮಗ ಜ್ಯಾಕ್ ಎಂದು ಗುರುತಿಸಲಾಗಿದೆ.

ಎಲ್ಲರೂ ನಾಸ್ಕರ್ ಸಮುದಾಯದಲ್ಲಿ ಪ್ರಸಿದ್ಧರಾಗಿದ್ದಾರೆ ಎಂದು ಜಂಟಿ ಹೇಳಿಕೆಯಲ್ಲಿ, ಕುಟುಂಬಗಳು ಮೂಲಗಳು ತಿಳಿಸಿವೆ.

ವಿಮಾನವು ವಿಮಾನ ನಿಲ್ದಾಣದಿಂದ ಹೊರಟು ತಕ್ಷಣವೇ ಬೆಂಕಿ ಹೊತ್ತಿಕೊಳ್ಳುವ ಮೊದಲು ಇಳಿಯಲು ಪ್ರಯತ್ನಿಸಿತು ಎಂದು ಸ್ಥಳೀಯ ಮಾಧ್ಯಮ ಸಂಸ್ಥೆ ವರದಿ ಮಾಡಿದೆ.

# ನಿಮಗಾಗಿ ನಾವು ಸಂಸ್ಥೆಯ ಹೊದಿಕೆ ವಿತರಣೆ



**ಬಳ್ಳಾರಿ, ಡಿ.19–** ನಗರದ ಬಸ್ ನಿಲ್ದಾಣ, ರೈಲ್ವೇ ನಿಲ್ದಾಣ, ಮುಖ್ಯ ರಸ್ತೆಗಳು ಮತ್ತು ವೃತ್ತಗಳು ಹಾಗೂ ಸರ್ಕಾರಿ ಆಸ್ಪತ್ರೆಗಳ ಆವರಣಗಳಲ್ಲಿ ನಿಮಗಾಗಿ ನಾವು ಸಂಸ್ಥೆಯ ವತಿಯಿಂದ ಸೂರಿಲ್ಲದ ಎಷ್ಟೋ ಮಂದಿ ಚಳಿಯ ರಾತ್ರಿಗಳನ್ನು ಬಹಳ ಕಷ್ಟಗಳಲ್ಲಿ ಕಳೆಯುತ್ತಿರುವುದನ್ನು ಗಮನಿಸಿ ಅಂತಹವರಿಗೆ ಹೊದ್ದುಕೊಳ್ಳಲು ಹೊದಿಕೆಯನ್ನು ನೀಡುವ 'ಹೊದಿಕೆ ಜೀವಕೆ' ಯೋಜನೆಯನ್ನು ಸತತ ಐದನೇ ವರ್ಷ ರೂಪಿಸಿಕೊಂಡು ರಾತ್ರಿ ಇಡೀ ನಗರದಲ್ಲಿ ಸಂಚರಿಸಿ ಅವಶ್ಯಕತೆ ಇರುವವರಿಗೆ ಹೊದಿಕೆ ನೀಡಿ ಆಸರೆಯಾದರು.

ಈ ಸಂಧರ್ಭದಲ್ಲಿ ಸಂಸ್ಥೆಯ ಅಧ್ಯಕ್ಷ ವಿನಯ್ ರವರು ಮಾತಾಡಿ ಹೊದಿಕೆ ಜೀವಕೆ ಯೋಜನೆಯು ಡಿಸೆಂಬರ್ ತಿಂಗಳು ಪೂರ್ತಿ ನಡೆಯಲ್ಲಿದ್ದು ಹಂತಹಂತವಾಗಿ ವಿತರಣೆ ಮಾಡಲಿದ್ದು, ಮುಂದಿನ ವಾರದಲ್ಲಿ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಯ ತಾಲೂಕುಗಳಲ್ಲಿ ವಿತರಣೆ ಮಾಡಲಿದ್ದೇವೆ ಎಂದು ತಿಳಿಸಿದರು, ಕಾರ್ಯದರ್ಶಿಯಾದ ಮೆಹಬೂಬ್ ಭಾಷ ರವರು ಮಾತಾಡಿ ನಿಮ್ಮ ಸುತ್ತಮುತ್ತ ಹೊದಿಕೆಗಳ ಅವಶ್ಯಕತೆ ಇರುವವರ ಮಾಹಿತಿ ನೀಡಿದರೆ ಅವರಿಗೆ ಹೊದಿಕೆಗಳನ್ನು ವಿತರಿಸುವ ಕೆಲಸ ಮಾಡುತ್ತೇವೆ ಎಂದು ತಿಳಿಸಿದರು. ಮಹಿಳಾ ಕಾರ್ಯದರ್ಶಿಯಾದ ವನಿತಾ.ಎಂ. ಈ ಬಾರಿ ಹೊದಿಕೆಗಳ ಜೊತೆ, ಆಶ್ರಮದ ಹಿರಿಯರಿಗೆ, ಅವಶ್ಯಕತೆ ಇರುವ ಹಿರಿಯ ನಾಗರಿಕರಿಗೆ ಸ್ವೆಟ್ಟರ್ ಗಳನ್ನೂ ಸಹ ವಿತರಣೆ ಮಾಡಲಿದ್ದಯ ಈ ಯೋಜನೆಗೆ ನೆರವಾಗ ಬಯಸುವವರು ತಪ್ಪದೇ ಸಂಸ್ಥೆ ಮೊಬೈಲ್ ಸಂ. 9448584400 ನ್ನು ಸಂಪರ್ಕಿಸಿ ಎಂದು ತಿಳಿಸಿದರು, ವಿತರಣೆಯಲ್ಲಿ ಹ್ಯಾಲಿಸ್ ಬ್ಲೂ ಕಂಪನಿಯ ವೀರನಗೌಡ, ಪ್ರವೀಣ್,ವಿಷ್ಣುಪ್ರೀಯ.ನಿನಾ ಸಂಸ್ಥೆಯ ಬಾಲಸುಬ್ರಹ್ಮಣ್ಯ, ಶಿವಶಂಕರ್, ವಸಂತ್, ನವೀನ್, ಬಾಲರಾಜ್, ಅನಿಲ್, ರಜತ್, ಭಾಷ,ವಿನಯ್, ಹರ್ಷವರ್ಧನ, ವೆಂಕಟೇಶ್, ಹಸೇನ್, ಚಿರಂಜೀವಿ,ವಿಶ್ವ,ನಾಗರಾಜ್ ಇತರರು ಪಾಲ್ಗೊಂಡಿದ್ದರು

# ರೈತರಿಗೆ ಸಡಗರದ ಹಬ್ಬ ಸಂಭ್ರಮದ ಕೂಟ : ಎಳ್ಳಮಾಸಿ



**ಕಮಲನಗರ,ಡಿ.19–**ಹಳ್ಳಿಯ ಒಕ್ಕಲಿಗರಿಗೆ ಇದೊಂದು ಮಹತ್ವದ ಹಬ್ಬದ ದಿನವಾಗಿದೆ. ಹಿಂಗಾರು ಬೆಳೆಗಳಲ್ಲಿ ಚಳಿಯ ವಾತಾವರಣದಲ್ಲಿ ಬೆಳೆಸಿದ ಬೆಳೆಗಳಿಗೆ ವಿವಿಧ ಪ್ರಕಾರದ ಅಡುಗೆಯನ್ನು ಮಾಡಿಕೊಂಡು ಬುಟ್ಟಿಯಲ್ಲಿ ತೆಗೆದುಕೊಂಡು ಹೊಲಕ್ಕೆ ಹೋಗಿ ಹೊಲದಲ್ಲಿರುವ ಬನ್ನಿ ಗಿಡದ ಕೆಳಗೆ ಪಾಂಡವರ ಸಂಕೇತವಾಗಿರುವ ಐದು ಕಲ್ಲುಗಳನ್ನು ಪೂಜೆ ಮಾಡುತ್ತಾರೆ. ಹೊಲದಲ್ಲಿ ಕೊಂಪೆಮಾಡಿ ಅದರ ಒಳಗಡೆ ಪಾಂಡವರ ಮೂರ್ತಿ ಇಟ್ಟು ಹೂಗಳಿಂದ ಅಲಂಕರಿಸಿ ಪೂಜೆಯನ್ನು ಸಲ್ಲಿಸುತ್ತಾರೆ.

ವಿಧಿ ವಿಧಾನಗಳೊಂದಿಗೆ ಮಂತ್ರ ಇಲ್ಲದೆ ಆಚರಣೆ ಇಲ್ಲದೆ ಪೂಜೆಯನ್ನು ಭಿನ್ನ ರೀತಿಯಲ್ಲಿ ಕಾಣದೆ,ಸರಳ ರೀತಿಯಲ್ಲಿ ಪೂಜೆ ಸಲ್ಲಿಸಿ ಭೂಮಿ ತಾಯಿಗೆ ನಮಿಸುತ್ತಾನೆ. ಎಡೆ ತೋರಿಸಿ ಚರಗವನ್ನು ಚೆಲ್ಲುತಾನೆ.

ಹೊಲಗಳು ಹಚ್ಚ ಹಸಿರಿನ ಬೆಳೆಗಳಿಂದ ಮೈತುಂಬಿಕೊಂಡು ಕಂಗೊಳಿಸುವಂತೆ ತುಂಬು ಬಸುರಿಯಂತಿರುವ ಭೂಮಿತಾಯಿ ಪೂಜೆ ಸಲ್ಲಿಸುವ ರೈತರ ಪ್ರಮುಖ ಹಬ್ಬಗಳಲ್ಲೊಂದಾದ ಎಳ್ಳು ಅಮಾವಾಸ್ಯೆ ಹಬ್ಬ ಹೆಮ್ಮೆಯ ಹಬ್ಬ ಇದಾಗಿದೆ.

ಅಂತೆಯೇ ಭೂಮಿಯು ಎಲ್ಲಾ ಬೆಳೆಗಳಿಂದ ಹೊಲ ಹಚ್ಚಹಸಿರಾಗಿದ್ದಾಗ ಆಕೆ ಗರ್ಭಿಣಿಯಾಗಿರುತ್ತಾಳೆ ಅವಳಿಗೆ ಬಯಕೆ ತೀರುವ ನೀಟ್ಟಿನಲ್ಲಿ ಈ ರೀತಿಯ ಎಳ್ಳು ಅಮಾವಾಸ್ಯೆ ಹಬ್ಬ ಮಾಡುವ ಮೂಲಕ ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದೆ.ಹೀಗಾಗಿ ಈ ಹಬ್ಬಕ್ಕೆ ವಿಶೇಷ ರೀತಿಯಲ್ಲಿ ವಿವಿಧ ಪದಾರ್ಥಗಳಿಂದ ಮಾಡಿದ ಅಡುಗೆಯಿಂದ ಕಾಯಿ ಪಲ್ಯಮಾಡುತ್ತಾರೆ. ಅವರೆಕಾಯಿ,ಕಡಲೆಬೀಜ, ಬಟಾಣಿ, ತೊಗರಿಕಾಯಿ, ಮಂತ್ಯೆಪಲ್ಯ ,ಪಾಲಕ್, ಉಳ್ಳಾಗಡ್ಡಿ ತಪ್ಪಲು, ಗಜರಿ, ಈರುಳ್ಳಿ ಸೋಪು, ಹಸಿ ಹುಣಸಿನಕಾಯಿ, ಹಣ್ಣು,ಹಸಿ ತರಕಾರಿ ಕಡಲೆ ಹಿಟ್ಟಿನಿಂದ ಸಿದ್ಧಪಡಿಸಿರುವ ಭಜ್ಜಿ ತಯಾರಿಸುತ್ತಾರೆ. ನಾನಾ ತರಹದ ಅಡಿಗೆ ಮಾಡಿ ಕಿಚಡಿ ಅನ್ನ, ಬಿಳಿ ಅನ್ನ, ಚಕೋಲಿ, ಸಜ್ಜಿ ರೊಟ್ಟಿ, ಜೋಳದ ರೊಟ್ಟಿ, ಅಂಬಲಿ, ಹುಗ್ಗಿ ಒಂದೇ ಎರಡೇ ಹತ್ತಾರು ತರಹದ ತಿಂಡಿ ತಿನಿಸುಗಳನ್ನು ಭಜ್ಜಿ ರೊಟ್ಟಿಯೊಂದಿಗೆ ವಿಶೇಷ ಪೂಜೆ ಸಲ್ಲಿಸಿ ಭೂತಾಯಿಗೆ ಪೂಜಿಸಿ ಎಡೆ ತೋರಿಸಿ ಕೊಂಪೆಯ ಸುತ್ತಲೂ ಹಾಗೂ ಬೆಳೆ ಬೆಳೆದ ಹೊಲದಲ್ಲಿ ನಿಂತು ಚರಗವನ್ನು ಚೆಲ್ಲುತ್ತಾರೆ.

ಹೊಲದ ರೈತನಾಗಿರುವನು ಕುಂಬಾರ ಮನೆಯಿಂದ ತಂದಿರುವ ಮಡಿಕೆಯನ್ನು ಮಗ್ಗಿ –ಮುಚ್ಚಳದಲ್ಲಿ ಮಾಡಿರುವ ಆಹಾರ ಪದಾರ್ಥಗಳನ್ನು ಮಾಡಿ ಮಿಶ್ರಣ ಮಾಡಿ ಚೆಲ್ಲುತ್ತಾರೆ ಓಲಿಗ್ಯಾ ಓಲಿಗ್ಯಾಎಂದು ಹೇಳಿದರೆ ಇನ್ನೊಬ್ಬ ಚಾಲೋ ಪಲಗ್ಯಾ ಎಂದು ಘೋಷಣೆಗಳೊಂದಿಗೆ ಚರಗ ಚೆಲ್ಲುತ್ತಾರೆ. ಪಾಂಡವರ ಮೂರ್ತಿ ಮುಂದೆ ದೀರ್ಘ ದಂಡ ನಮಸ್ಕಾರ ಮಾಡಿ ದಾಸೋಹ ಮಾಡಿಸುತ್ತಾರೆ. ಈ ದಾಸೋಸಕೆ ಎಲ್ಲಿಲ್ಲದ ಸಂಬಂಧಿಕರು ಹಳ್ಳಿಯನ್ನು ಬಿಟ್ಟು ಹೋಗಿದ್ದವರು ಪಟ್ಟಣದಿಂದ ಹಳ್ಳಿ ಕಡೆ ಮುಖ ಮಾಡಿದವರು ಸಂಬಂಧಿಕರು ಹಾಗೂ ಆತ್ಮೀಯರೆಲ್ಲ ಹೊಲಕ್ಕೆ ಬಂದು ಭೋಜನವನ್ನು ಸ್ವೀಕರಿಸುತ್ತಾರೆ. ಮಹಿಳೆಯರು ಯುವಕರು ಮಕ್ಕಳು ಭೂಮಿತಾಯಿಯ ಮಕ್ಕಳಂತೆ ಭೂಮಿಯನ್ನು ನಂಬಿಕೊಂಡಿರುವ ರೈತರಿಗೆ ಇದೊಂದು ಜೀವನೋತ್ಸಾಹದ ಸಂಭ್ರಮದ ಹಬ್ಬ ಇದ್ದಾಗಿದೆ. ಅಂತೆಯೇ ಭೂಮಿ ತಾಯಿಯ ಬಯಕೆ ತೀರಿಸುವ ಹಬ್ಬವು ಇದಾಗಿದೆ ಎಂದರೆ ತಪ್ಪಾಗಲಿಕ್ಕಿಲ್ಲ .ಹಳ್ಳಿಯ ಒಕ್ಕಲಿಗರಿಗೆ ಇದೊಂದು ಮಹತ್ವದ ಹಬ್ಬದ ದಿನವಾಗಿದೆ.

ಈ ಹಬ್ಬದಲ್ಲಿ ರೈತರ ಶ್ರಮ ಫಲ ಸಿಗಲಿ ಬೆಳೆ ಹುಲುಸಾಗಿ ಬರಲಿ ಎನ್ನುವ ಉದ್ದೇಶ ಇದಾಗಿದೆ.


ರೈತರ ಹೊಲಗಳಲ್ಲಿ ಜೋಳದ ತೆನೆಯ ಕಾಳುಗಳನ್ನು ತಿನ್ನಬಾರದು ಬೆಳೆದಿರುವ ಬೆಳೆಯನ್ನ ಕೀಟನಾಶಕ ತಡೆಗಟ್ಟಬೇಕೆಂದು ಚರಗ ಚೆಲ್ಲುವ ಪದ್ಧತಿಯನ್ನು ಇರುವುದು ರೈತ ನಂಬಿದ್ದಾನೆ.

ಈ ಕಾರಣದಿಂದ ಚರಗಾ ಚೆಲುವ ಪದ್ಧತಿ ಇಂದಿಗೂ ಹೊಲದ ಸುತ್ತಮುತ್ತಲು ಚರಗಾ ಚೆಲ್ಲುವುದು ಕೊಂಡುಕೊಳ್ಳಬಹುದು. ಕಮಲನಗರ ತಾಲೂಕಿನಾದ್ಯಂತ ಸುತ್ತಮುತ್ತಲಿನ

ರೈತರು ಕುಟುಂಬಗಳು ಇಂದು ಪ್ರತಿ ಹೊಲಗಳಲ್ಲಿ ಎಳ್ಳು ಅಮಾವಾಸ್ಯೆ ಆಚರಿಸುತ್ತಾರೆ. ಇದರಿಂದ ಪಕ್ಷಿಗಳು ಕೀಟ ನಿಯಂತ್ರಕ್ಕೆ ಒತ್ತು ನೀಡುವ ನೈಸರ್ಗಿ ಪದ್ಧತಿ ಇರುವುದನ್ನು

ಕೃಷಿಯ ಅವಿಭಾಜ್ಯ ಅಂಗವಾಗಿದೆ. ಇದರೊಂದಿಗೆ ಸಡಗರ ಸಂಭ್ರಮದಿಂದ ಇಡೀ ಹೊಲದ ಬೆಳೆ ಸಮೃದ್ಧಿಯಾಗಲು ರೈತನ ಗಾಢವಾದ ನಂಬಿಕೆಯಾಗಿದೆ ಕುಟುಂಬ ನೆಂಟರು ಸ್ನೇಹಿತರಲ್ಲರೂ ಹಾಗೂ ಮಹಿಳೆಯರು ಯುವಕರು ಮತ್ತು ಮಕ್ಕಳು ಹೊಲದಲ್ಲಿ ಸೇರಿ ಒಟ್ಟಿಗೆ ಊಟ ಮಾಡುವ ಊಟ ಸಂಭ್ರಮದ ಕೂಟವೆಂದೇ ತಿಳಿಬೇಕಾಗಿದೆ.

# ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕ್ರಿಕೆಟ್ ಪಂದ್ಯಾವಳಿಗೆ ಗ್ರೀನ್ ಸಿಗ್ನಲ್, ಮಾರ್ಗಸೂಚಿ ಸಿದ್ಧತೆ



**ಬೆಂಗಳೂರು,ಡಿ.19–**ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕ್ರಿಕೆಟ್ ಪಂದ್ಯಗಳನ್ನು ಪುನರಾರಂಭಿಸಲು ಅಂತಿಮವಾಗಿ ಗ್ರಿನ್ ಸಿಗ್ನಲ್ ದೊರೆತಿದೆ. ಆರ್‌ಸಿಬಿ ತಂಡದ ವಿಜಯೋತ್ಸವದ ಸಂದರ್ಭದಲ್ಲಿ ಉಂಟಾದ ಕಾಲ್ತುಳಿತದ ಘಟನೆಯ ನಂತರ ಕ್ರಿಡಾಂಗಣದಲ್ಲಿ ಕ್ರಿಕೆಟ್ ಪಂದ್ಯಾವಳಿಗಳನ್ನು ಆಯೋಜಿಸುವುದಕ್ಕೆ ಅನುಮತಿ ನಿರಾಕರಿಸಲಾಗಿತ್ತು.ಇದೀಗ ನಗರ ಪೊಲೀಸರು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಗೆ ಕಟ್ಟುನಿಟ್ಟಾದ 17 ಅಂಶಗಳ ಮಾರ್ಗಸೂಚಿಯನ್ನು ಸಿದ್ದಪಡಿಸಿ ಕ್ರಿಕೆಟ್ ಪಂದ್ಯಗಳ ಆಯೋಜನೆಗೆ ಅನುಮತಿ ನೀಡಲು ಸಜ್ಜಾಗಿದ್ದಾರೆ.

ಗೃಹ ಇಲಾಖೆ ಸಿದ್ದ ಪಡಿಸಿರುವ ಷರತ್ತುಗಳ ಕುರಿತು ಕೆಎಸ್‌ಸಿಎ ಪದಾಧಿಕಾರಿಗಳು ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಅವರ ನೇತೃತ್ವದಲ್ಲಿ ಗೃಹ ಸಚಿವರನ್ನು ಭೇಟಿ ಮಾಡಿ ಚರ್ಚಿಸಲಿದ್ದಾರೆ.ನಗರ ಪೊಲೀಸ್ ಆಯುಕ್ತರು ಸಮಿತಿ ವರದಿಯ ಶಿಫಾರಸ್ಸುಗಳನ್ನು ಆಧರಿಸಿ ಕಾಲ್ತುಳಿತದಂತಹ ಘಟನೆಗಳು ಪುನರಾವರ್ತನೆಯಾಗದಂತೆ ತಡೆಯಲು 17 ಮಾರ್ಗಸೂಚಿಗಳನ್ನು ಸಿದ್ದಪಡಿಸಿದ್ದಾರೆ. ಕೆಎಸ್‌ಸಿಎ ಈ ಷರತ್ತುಗಳನ್ನು ಈಡೇರಿಸಿದ ತಕ್ಷಣವೇ ಪಂದ್ಯಗಳನ್ನು ಆಯೋಜಿಸಲು ಅನುಮತಿ ನೀಡಲಾಗುತ್ತದೆ. Green signal for cricket tournament at Chinnaswamy Stadium

**ಮಾರ್ಗಸೂಚಿಯಲ್ಲಿ ಏನಿದೆ?:**

33 ಸಾವಿರ ಸಾಮರ್ಥ್ಯದ ಕ್ರೆಡಾಂಗಣದ ಸುತ್ತ ಪಾರ್ಕಿಂಗ್ ಪಿಕ್ ಅಂಡ್ ಡ್ರಾಪ್ ಗೆ ವ್ಯವಸ್ಥೆ ಮಾಡಬೇಕು.ಪ್ರವೇಶ ದ್ವಾರಗಳು ಟ್ ಪಾತ್ ಗಳ ಮೇಲೆಯೇ ಇರೋದ್ರಿಂದ ಪ್ರೇಕ್ಷಕರು ಕ್ಯೂ ನಿಲ್ಲುವುದಕ್ಕೆ ಕೆಎಸ್‌ಸಿಎ ಸ್ವತ್ತಿನಲ್ಲಿ ಪ್ರತ್ಯೇಕ ವ್ಯವಸ್ಥೆ ಮಾಡಬೇಕು.

ಕಿರಿದಾದ ಗೇಟ್ ಗಳನ್ನ ಕನಿಷ್ಠ 6 ಅಡಿ ಅಗಲ, ಉಬ್ಬು ತಗ್ಗು, ಮೆಟ್ಟಿಲುಗಳನ್ನ ಸರಿಪಡಿಸಿ, ಎಂಟ್ರಿ ಎಕ್ಸಿಟ್ ಸುಲಭಗೊಳಿಸಬೇಕು.ಅಂತರಾಷ್ಟ್ರಿಯ ಪಂದ್ಯಾವಳಿಗಳ ವೇಳೆ ಮಹಿಳೆಯರು, ಮಕ್ಕಳ ಪ್ರವೇಶ ನಿರ್ಗಮನಕ್ಕೆ ಪ್ರತ್ಯೇಕ ವ್ಯಸ್ಥೆ ಮಾಡಬೇಕು.ತುರ್ತು ಪರಿಸ್ಥಿತಿ ನಿಯಮಗಳಂತೆ ಆಂಬ್ಯುಲೆನ್ಸ್, ವೈದ್ಯಕೀಯ, ಆಂಬ್ಯುಲೆನ್ಸ್ ಗೆ ಪ್ರತ್ಯೇಕ ಮಾರ್ಗ, ಮೆಡಿಕಲ್ ಎಮರ್ಜೆನ್ಸಿ ತಂಡಗಳ ಶಾಶ್ವತ ವ್ಯವಸ್ಥೆ ಮಾಡಬೇಕು.

ಅಗ್ನಿಶಾಮಕ ದಳ ವಿದ್ಯುತ್ ಇಲಾಖೆಯಿಂದ ಆಡಿಟ್ ಮಾಡಿಸಿ ವರದಿ ಪಡೆಯಬೇಕು.ಸುರಕ್ಷತೆ ದೃಷ್ಟಿಯಿಂದ ಯೂನಿಕ್ ಐಡಿ ಚೆಕಿಂಗ್, ಬಾಂಬ್ ನಿಷ್ಕ್ರಿಯ ದಳ, ಮೆಟಲ್ ಡಿಟೆಕ್ಟರ್ ಅಳವಡಿಸಿ ನುರಿತ ಸಿಬ್ಬಂದಿ ತರಬೇತಿ ಸಿಬ್ಬಂದಿ ನೇಮಕ ಮಾಡಬೇಕು.

ಆಟಗಾರರಿಗೆ ಪ್ರತ್ಯೇಕವಾಗಿ ಪ್ರವೇಶ ಮತ್ತು ನಿರ್ಗಮನ ಮಾರ್ಗಗಳನ್ನ ಕಾಯ್ದಿರಿಸಬೇಕು.

ತುರ್ತು ಪರಿಸ್ಥಿತಿ ವೇಳೆ ಸಾರ್ವಜನಿಕರಿಗೆ ಸೇಫ್ಟಿ ಪಾಯಿಂಟ್ ಎಕ್ಸಿಟ್‌ಗೆ ಅಂತರಾಷ್ಟ್ರಿಯ ಮಾನದಂಡಗಳ ಯೋಜನೆ ತಯಾರಿಸಬೇಕು.ಪ್ರವೇಶ ದ್ವಾರಗಳ ಬಳಿ ಬ್ಯಾಗೇಜ್ ಸ್ಕ್ಯಾನರ್ ಗಳ ಅಳವಡಿಸಿ ಸಿಸಿಟಿವಿ ಕಣ್ಗಾವಲಿನಲ್ಲಿ ದೀರ್ಘಾವಧಿ ಸ್ಟೊ?ರೆಜ್ ವ್ಯವಸ್ಥೆ ಮಾಡಬೇಕು.

*ಕೆಲಸಗಾರರು, ಸೆಕ್ಯೂರಿಟಿ ಗಾರ್ಡ್, ಮಳಿಗೆ ಇಡುವವರ ಬಗ್ಗೆ ಪೊಲೀಸ್ ವೆರಿಫಿಕೇಷನ್ ಸರ್ಟಿಫಿಕೇಟ್ ಜೊತೆ ಸೆಕ್ಯೂರಿಟಿ ಏಜೆನ್ಸಿಗಳ ಲೈಸೆನ್ಸ್ ಪಡೆಯಬೇಕು.ಪಂದ್ಯದ ವೇಳೆ ಒಳಗಡೆ ಮಾರಾಟ ಮಾಡುವ ತಿಂಡಿ, ತಿನಿಸುಗಳ ಪರಿಶೀಲನೆಗೆ ನಿರ್ದಿಷ್ಟ ಮಾನದಂಡ ನಿಗದಿಪಡಿಸಬೇಕು.ಸಾರ್ವಜನಿಕ ಸಾರಿಗೆ ಮೂಲಕ ಬರುವ ಪ್ರೇಕ್ಷಕರ ಪ್ರವೇಶ ಮತ್ತು ನಿರ್ಗಮನಕ್ಕೆ ಸರಿಯಾದ ವ್ಯವಸ್ಥೆ ಮಾಡಬೇಕು.

ಅಂತರಾಷ್ಟ್ರಿಯ ಗುಣಮಟ್ಟದ ಗುಂಪು ನಿರ್ವಹಣೆ ಮೂಲಭೂತ ಸೌಕರ್ಯಗಳ ವ್ಯವಸ್ಥೆ ಮಾಡಬೇಕು.ಪ್ರೇಕ್ಷಕರ ಪ್ರವೇಶ ಸಂಖ್ಯೆ ನಿಖರತೆಗಾಗಿ ವ್ಯವಸ್ಥೆ ಮಾಡಬೇಕು.ಟಿಕೆಟ್ ವಿಚಾರಣೆ, ಮಾರಾಟ, ವೇಟಿಂಗ್ ಮಾಡುವರಿಗೆ ಪ್ರತ್ಯೇಕ ಸ್ಥಳಗಳನ್ನ ವ್ಯವಸ್ಥೆ ಮಾಡಬೇಕು ಹಾಗೂ ಇನ್ನಿತರ ಮಾರ್ಗಸೂಚಿಗಳನ್ನು ಸಿದ್ದಪಡಿಸಲಾಗಿದೆ.

ಯುವ ಮಾರ್ಗ

www.yuvamarga.com Yuva Marga yuva_marga_

## ತುರವಿಹಾಳದಲ್ಲಿ ಉಪ ಚುನಾವಣೆ; ಶಸ್ತ್ರಗಳನ್ನು ಠಾಣೆಯಲ್ಲಿಡಲು ಆದೇಶ



**ರಾಯಚೂರು,ಡಿ.19–** ನಗರ ಸ್ಥಳೀಯ ಸಂಸ್ಥೆ ಸಾರ್ವತ್ರಿಕ ಹಾಗೂ ಉಪ ಚುನಾವಣೆ–2025ರ ಚುನಾವಣಾ ವೇಳಾಪಟ್ಟಿ ಘೋಷಣೆಯಾಗಿರುವ ಹಿನ್ನಲೆಯಲ್ಲಿ ಈ ಚುನಾವಣೆಯು ಶಾಂತಿಯುತವಾಗಿ ನಡೆಸಲು ಮುಂಜಾಗ್ರತೆ ಕ್ರಮವಾಗಿ (ರಾಷ್ಟ್ರೀಕೃತ ಬ್ಯಾಂಕುಗಳು ಹಾಗೂ ರಿಜರ್ವ್ ಬ್ಯಾಂಕ್ ಅವರಿಂದ ಅನುಮೋದಿಸಿದ ಶೆಡ್ಯೂಲ್ಡ್ ಬ್ಯಾಂಕುಗಳ ಸೆಕ್ಯೂರಟಿ ಗಾರ್ಡಗಳ, ಆಯುಧಗಳನ್ನು ಹೊರತುಪಡಿಸಿ) ಚುನಾವಣಾ ಪ್ರಕ್ರಿಯೆ ಮುಗಿಯುವರೆಗೆ ಸಿಂಧನೂರು ತಾಲೂಕಿನ ತುರ್ವಿಹಾಳ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಆಯುಧಗಳನ್ನು ಪರವಾನಿಗೆದಾರರು ಸಾರ್ವಜನಿಕ ಸ್ಥಳಗಳಲ್ಲಿ ಹೊತ್ತು ಪ್ರದರ್ಶನ ಮಾಡುವುದನ್ನು ನಿಷೇಧಿಸಿ ಹಾಗೂ ಆಯುಧಗಳನ್ನು ಸಂಬಂಧಪಟ್ಟ ಪೊಲೀಸ್ ಠಾಣೆಗೆ ಠೇವಣಿ ಮಾಡುವಂತೆ ಜಿಲ್ಲಾ ದಂಡಾಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ಆದೇಶ ಹೊರಡಿಸಿದ್ದಾರೆ.

## ಅಂಚೆ ಜೀವ ವಿಮೆ ಉತ್ಪನ್ನಗಳ ಮಾರಾಟ ಪ್ರತಿನಿಧಿಗಳ ಆಯ್ಕೆಗೆ ನೇರ ಸಂದರ್ಶನ

**ರಾಯಚೂರು,ಡಿ.19–**ಇಲ್ಲಿನ ಅಂಚೆ ಇಲಾಖೆಯಿಂದ ರಾಯಚೂರು ವಿಭಾಗದಲ್ಲಿ ಅಂಚೆ ಜೀವ ವಿಮೆ ಹಾಗೂ ಗ್ರಾಮೀಣ ಅಂಚೆ ಜೀವ ವಿಮೆ ಉತ್ಪನ್ನಗಳನ್ನು ಮಾರಾಟ ಮಾಡಲು ನೇರ ಪ್ರತಿನಿಧಿಗಳ ಆಯ್ಕೆಗಾಗಿ ನೇರ ಸಂದರ್ಶನಕ್ಕೆ ಆಸಕ್ತ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಡಿಸೆಂಬರ್ 29ರಂದು ಬೆಳಿಗ್ಗೆ 11ಗಂಟೆಗೆ ರಾಯಚೂರಿನ ಗಂಜ್ ವೃತ್ತದ ಬಳಿರುವ ಅಂಚೆ ಅಧೀಕ್ಷಕರ ಕಚೇರಿಯಲ್ಲಿ ನೇರ ಸಂದರ್ಶನ ಹಮ್ಮಿಕೊಳ್ಳಲಾಗಿದೆ.

ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳು 10ನೇ ತರಗತಿ ಪಾಸಾಗಿರಬೇಕು. ವಯಸು ಕನಿಷ್ಠ 18 ಆಗಿರಬೇಕು. ನಿರುದ್ಯೋಗಿ, ಸ್ವಯಂ ಉದ್ಯೋಗ ನಿರತ ಯುವಕರು, ವಿಮಾ ಕಂಪನಿಗಳ ಮಾಜಿ ಏಜೆಂಟರು, ಸಲಹೆಗಾರರು, ಮಾಜಿ ಸೈನಿಕರು, ಅಂಗನವಾಡಿ ಕಾರ್ಯಕರ್ತೆಯರು, ಮಹಿಳಾ ಮಂಡಳದ ಕಾರ್ಯಕರ್ತೆಯರು, ನಿವೃತ್ತ ಪ್ರಧಾನ ಮತ್ತು ಗ್ರಾಮ ಪಂಚಾಯತ್ ಸದಸ್ಯರು ಹಾಗೂ ಅಂಚೆ ವಿಭಾಗದ ಮುಖ್ಯಸ್ಥರಿಗೆ ಸಮಂಜಸವೆಂದು ಕಂಡುಬಂದ ಯಾವುದೇ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲಾಗುತ್ತದೆ.

ನುರಿತ, ಸಂವಹನಾ ಕಲೆ ಹಾಗೂ ವಿಮಾ ಮಾರಾಟ ಕ್ಷೇತ್ರದಲ್ಲಿ ಪೂರ್ವಾನುಭವ ಹೊಂದಿರುವವರಿಗೆ ಆದ್ಯತೆ ನೀಡಲಾಗುತ್ತಿದೆ. ಆಯ್ಕೆಯಾದ ಅಭ್ಯರ್ಥಿಗಳು 5 ಸಾವಿರ ರೂ.ಗಳ ರಾಷ್ಟ್ರೀಯ ಉಳಿತಾಯ ಪತ್ರ ಅಥವಾ ಕಿಸಾನ್ ವಿಕಾಸ ಪತ್ರದ ರೂಪದಲ್ಲಿ ಭದ್ರತಾ ಠೇವಣಿ ಇಡಬೇಕು. ಆಯ್ಕೆಯಾದ ಪ್ರತಿನಿಧಿಗಳಿಗೆ ವ್ಯವಹಾರಕ್ಕೆ ತಕ್ಕಂತೆ ಸೂಕ್ತ ಕಮಿಷನ್ ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಅಂಚೆ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ ಎಂದು ರಾಯಚೂರು ವಿಭಾಗದ ಅಂಚೆ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ದೇವದುರ್ಗದಲ್ಲಿಂದು ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘ ವಾರ್ಷಿಕ ಮಹಾಸಭೆ



**ದೇವದುರ್ಗ,ಡಿ.19–**ಪಟ್ಟಣದ ಶಾಹಪುರ್ ರಸ್ತೆಯಲ್ಲಿರುವ ಶಹಾಪುರ ರಸ್ತೆಯಲ್ಲಿರುವ ಬಿ.ಎಚ್. ಃ.ಊ. ಕಲ್ಯಾಣ ಮಂಟಪದಲ್ಲಿ ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘ ದೇವದುರ್ಗದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಸರ್ಕಾರಿ ನೌಕರ ಸಂಘದ ತಾಲೂಕಾಧ್ಯಕ್ಷ ಹನುಮಂತರಾಯ ಶಾಖೆ ಇವರ ಅಧ್ಯಕ್ಷತೆಯಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರಣ ತಾಲೂಕ ಶಾಖೆಯ ಎಲ್ಲಾ ಪದಾಧಿಕಾರಿಗಳು, ನಿರ್ದೇಶಕರುಗಳು, ನಾಮ ನಿರ್ದೇಶಿತ ನಿರ್ದೇಶಕರು ಹಾಗೂ ತಾಲೂಕಿನ ಎಲ್ಲಾ ಇಲಾಖೆಗಳ ಸರಕಾರಿ ನೌಕರರು ಈ ವಾರ್ಷಿಕ ಮಹಾಸಭೆಗೆ ಆಗಮಿಸಿ ಯಶಸ್ವಿಗೊಳಿಸಬೇಕೆಂದು ತಾಲೂಕ ಕಾರ್ಯದರ್ಶಿ ಮಹಾದೇವ ಪಾಟೀಲ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ

## ವೈದ್ಯೆಯ ಹಿಜಾಬ್ ಎಳೆದ ಸಿಎಂ ನಿತೀಶ್ ಕುಮಾರ್ ಕ್ಷಮೆಗೆ ಡಾ. ಕಾಮರಡ್ಡಿ ಆಗ್ರಹ

**ಕಲಬುರಗಿ:ಡಿ.19–** ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಕಾರ್ಯಕ್ರಮ ವೊಂದರಲ್ಲಿ ವೇದಿಕೆ ಮೇಲೆ ವೈದ್ಯೆಯ ಹಿಜಾಬ್ ಎಳೆದಿರುವ ಘಟನೆಯನ್ನು ಕಾಂಗ್ರೆಸ್ ಮುಖಂಡ ಹಾಗೂ ಖ್ಯಾತ ವೈದ್ಯರಾದ ಡಾ.ಎಸ್.ಬಿ.ಕಾಮರಡ್ಡಿ ಖಂಡಿಸಿದ್ದಾರೆ.ಈ ಕುರಿತು ಪತ್ರೀಕಾ ಪ್ರಕಟಣಿ ಹೋರಡಿಸಿದ ಅವರು ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ ಅವರು ಮುಸ್ಲಿಂ ಮಹಿಳಾ ವೈದ್ಯರ ನೇಮಕಾತಿ ಪತ್ರವನ್ನು ಸ್ವೀಕರಿಸುವಾಗ ಒಪ್ಪಿಗೆಯಿಲ್ಲದೆ ಮುಸ್ಲಿಂ ಮಹಿಳೆಯ ಹಿಜಾಬ್ನಲ್ಲಿ ದೈಹಿಕವಾಗಿ ಹಸ್ತಕ್ಷೇಪ ಮಾಡಿ ತೆಗೆದುಹಾಕಿರುವ ಅಸಹ್ಯಕರ ಕೃತ್ಯವನ್ನು ಖಂಡಿಸಿದರು. ಸಾರ್ವಜನಿಕ ವೇದಿಕೆಯಲ್ಲಿ ಮಹಿಳೆಯ ಘನತೆ ಮತ್ತು ನಮ್ರತೆಯನ್ನು ಗೌರವಿಸಬೇಕಿದೆ. ಅಧಿಕಾರವು ಅವರ ಗಡಿಗಳನ್ನು ಉಲ್ಲಂಘಿಸಲು ಅನುಮತಿ ನೀಡುವುದಿಲ್ಲ ಎಂದು ಹೇಳಿದ್ದು, ನಿತೀಶ್ ಅವರು ಮಹಿಳೆಯ ಬಳಿ ಕ್ಷಮೆಯಾಚಿಸಬೇಕು ಎಂದು ಆಗ್ರಹಿಸಿದ್ದಾರೆ.

# ಉಮಳಿ ಹೊಸೂರು ಕ್ರಿಸ್ತನ ಸಭೆ ವತಿಯಿಂದ ಉಚಿತ ಕಣ್ಣಿನ ತಪಾಸಣೆ ಶಿಬಿರ

ಯುವಮಾರ್ಗ ಸುದ್ದಿ



**ಮಾನ್ವಿ,ಡಿ.19–**ತಾಲೂಕಿನ ಉಮಳಿ ಹೊಸುರು ಕ್ರಿಸ್ತನ ಸಭೆ ವತಿಯಿಂದ ಉಚಿತ ಕಣ್ಣಿನ ತಪಾಸಣೆ ಶಿಬಿರವನ್ನು ಯಶಸ್ವಿಯಾಗಿ ನಡೆಯಿತು. ಈ ಕಾರ್ಯಕ್ರಮದಲ್ಲಿ ಸುಮಾರು 300 ಜನಕ್ಕೆಕಣ್ಣಿನ ತಪಾಸಣೆ ಮಾಡಲಾಯಿತು. ಈ ಗ್ರಾಮದಲ್ಲಿ ಕ್ರಿಸ್ತನ ಸಭೆ ತುಂಬಾ ಸಮಾಜಿಕವಾದಂತಹ ಕಾರ್ಯ ಕ್ರಮಗಳನ್ನು ಮಾಡುತ್ತ ಬರುತ್ತಿದೆ ಕೊವಿಡ ಸಮಯ ದಲ್ಲಿ ಆಹಾರ ಕಿಟ್ಟುಗಳನ್ನು ವಿತರಿಸಿದೆ ಮತ್ತು ಬೇಸಿಗೆ ಯಲ್ಲಿ ನೀರಿನ ಅರವಟ್ಟಿಗೆಗಳನ್ನು ಮಾಡಿ ದಾಹವನ್ನು ತೀರಿಸುವ ನಿಟ್ಟಿನಲ್ಲಿ ತೆಂಗಿನಕಾಯಿ ಎಳೆನೀರು ವಿತರಣೆ ಕಾರ್ಯಕ್ರಮ ಮಕ್ಕಳಿಗೆ ಪೆನ್ನು ಮತ್ತು ಪುಸ್ತಕಗಳ ವಿತರಣೆ ವೃದ್ಧರಿಗೆ ಬೆಡ್ ಶೀಟ್ ಗಳು ವಿತರಣೆ ಹೀಗೆ ಅನೇಕವಾದ ಸಾಮಾಜಿಕ ಸೇವೆ ಅತ್ಯುತ್ತಮವಾಗಿ ಮಾಡುತ್ತಾ ಬಂದಿದೆ ಈ ದಿನದಲ್ಲಿ ಸುಮಾರು ಮೂರು ನೂರು ಜನಕ್ಕೆ ಕಣ್ಣಿನ ತಪಾಸಣೆ ಮಾಡಲಾಯಿತು. ಇದರಲ್ಲಿ 36 ಜನಕ್ಕೆ ಕಣ್ಣಿನ ಪೊರೆ ಬಂದಿದ್ದು ಈ ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸೆಯನ್ನು ಉಚಿತವಾಗಿ ಮಾಡಲು ಡಾಕ್ಟರ್ ಶಂಕರ ದೃಷ್ಟಿ ಆಸ್ಪತ್ರೆ, ಸಿಂಧನೂರು ಮತ್ತು ಶಿವಮೊಗ್ಗ ಇವರು ತಿಳಿಸಿದ್ದಾರೆ ಇಂಥ ಕಾರ್ಯಕ್ರಮಗಳನ್ನು ಮಾಡುವುದರಿಂದ ಶ್ಲಾಘನೀಯ ವೈದ್ಯರು ಮತ್ತು ಜನರು ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದರೆ ಎಲ್ಲಾ ಜವಾಬ್ದಾರಿಯನ್ನು ಕ್ರಿಸ್ತನ ಸಭೆ ಹೊತ್ತುಕೊಂಡು ಮಾಡುತ್ತದೆ ಎಂದು ಸುವಾರ್ತಿಕರಾದ ದೇವರಾಜ್ ಅವರು ತಿಳಿಸಿದ್ದಾರೆ ಇಂತಹ ಇನ್ನೂ ಅನೇಕ ಸಮಾಜವಾದಂತಹ ಒಳ್ಳೆಯ ಕಾರ್ಯ ಕ್ರಮಗಳನ್ನು ಮಾಡುವಂತೆ ದೇವರು ಶಕ್ತಿಯನ್ನು ಅನುಗ್ರಹಿಸಲಿ ಮನುಷ್ಯರ ಪ್ರೋತ್ಸಾಹ ದಯೆಯು ಕೂಡ ಇರಲಿ ಜನಪರ ಬಡವರ ಇನ್ನು ಒಳ್ಳೆಯ ಕಾರ್ಯಕ್ರಮಗಳನ್ನು ಮಾಡುತ್ತ ಮುಂ ದುವರಿಲಿ ಎಂದು ಜನರು ಹರಸಿ ಕೊಂಡಾಡಿದರು ಈ ಕಣ್ಣಿನ ತಪಾಸಣೆ ಶಿಬಿರವನ್ನು ಏರ್ಪಡಿಸಿ ತುಂಬಾ ಒಳ್ಳೆಯ ಕೆಲಸ ಮಾಡಿದೆ ಎಂದು ಬಂದಂತ ಜನರು ಇದರಿಂದ ನನಗೆ ತುಂಬಾ ಉಪಯೋಗವಾಗಿದೆ ಕಣ್ಣಿನ ಪೊರೆಯ ಶಸ್ತ್ರ ಚಿಕಿತ್ಸೆ ಉಚಿತವಾಗಿ ನಮಗೆ ದೊರಕಿದೆ ಎಂದು ಬಹಳ ಸಂತೋಷಪಟ್ಟರು. ಈ ಕಾರ್ಯಕ್ರಮದಲ್ಲಿ ಕ್ರಿಸ್ತನ ಸಭೆಯ ಸುವಾರ್ತಿಕರಾದ ದೇವರಾಜ್ ಮತ್ತು ರೈತ ಸಂಘದ ರಾಜಸಾಬ್ ಚಂದ್ರಶೇಖರಯ್ಯ ಸ್ವಾಮಿ ಕುಮಾರ ಆನಂದಮ್ಮ ಮಹಾದೇವಮ್ಮ ಇನ್ನಿತರರು ಭಾಗಿ ಯಾಗಿದ್ದರು

# 5 ವರ್ಷದೊಳಗಿನ ಮಕ್ಕಳಿಗೆ ತಪ್ಪದೆ ಪೋಲಿಯೋ ಲಸಿಕೆ ಹಾಕಿಸಿ : ಗಿಣಿವಾರ ಶೇಖರಪ್ಪ

ಯುವಮಾರ್ಗ ಸುದ್ದಿ



**ಸಿಂಧನೂರು,ಡಿ.19–** ಜಿಲ್ಲಾಡ ಳಿತ, ಜಿಲ್ಲಾ ಪಂಚಾ ಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು, ತಾಲೂಕಾ ರೋಗ್ಯಾಧಿಕಾರಿಗಳ ಕಾರ್ಯಾ ಲಯ ಸಿಂಧನೂರು ಹಾಗೂ ಶಿಕ್ಷಣ ಇಲಾಖೆ , ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಸಿಂಧನೂರು ಗಳ ಸಂಯುಕ್ತ ಆಶ್ರಯದಲ್ಲಿ ಪಲ್ಸ್ ಪೋಲಿಯೋ ಕಾರ್ಯಕ್ರಮದ ಕುರಿತು ಜಾಗೃತಿ ಜಾಥಾ ನಡೆಯಿತು.

ಮಹೆಬೂಬಿಯಾ ಕಾಲೋನಿಯ ಚುನಾಯಿತ ಪ್ರತಿನಿಧಿಯಾದ ಗಿಣಿವಾರ ಶೇಖರಪ್ಪ ಜಾಥಾಗೆ ಚಾಲನೆ ನೀಡಿದರು. ನಂತರ ಮಾತನಾಡಿದ ಅವರು, "ರಾಷ್ಟ್ರವ್ಯಾಪಿ 5 ವರ್ಷದೊಳಗಿನ ಎಲ್ಲ ಮಕ್ಕಳಿಗೆ ಏಕಕಾಲದಲ್ಲಿ ಪಲ್ಸ್ ಪೋಲಿಯೋ ಲಸಿಕೆ ನೀಡಲಾಗುತ್ತದೆ. ಸಾರ್ವಜನಿಕರ ಸಹಕಾರ ಮತ್ತು ಸ್ವಯಂ ಪ್ರೇರಿತ ಲಸಿಕೆ ಹಾಕಿಸುವುದು ಅಗತ್ಯ" ಎಂದರು ನಿಮ್ಮ ಮಕ್ಕಳ ಭವಿಷ್ಯಕ್ಕಾಗಿ ಪೋಲಿಯೋ ಲಸಿಕೆ ಹಾಕಿಸಿ" ಎಂದು ಮಕ್ಕಳೊಂದಿಗೆ ಮಕ್ಕಳಾಗಿ ಘೋಷಣೆ ಕೂಗುವ ಮೂಲಕ ಸಾರ್ವಜನಿಕರಿಗೆ ಕರೆ ನೀಡಿದರು.

ತಾಲೂಕಾ ಹಿರಿಯ ಆರೋಗ್ಯ ಸಹಾಯಕ ಸಂಗನಗೌಡ ಮಾತನಾಡಿ, "5 ವರ್ಷದೊಳಗಿನ ಮಕ್ಕಳಿಗೆ ಡಿಸೆಂಬರ್ 21ರಂದು ಬೂತ್ ಮಟ್ಟದಲ್ಲಿ ಪೋಲಿಯೋ ಲಸಿಕೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅದಾದ ಮರು ದಿನದಿಂದ ನಮ್ಮ ಸಿಬ್ಬಂದಿಗಳು ಡಿಸೆಂಬರ್ 22 ರಿಂದ 24 ರ ವರೆಗೆ ಮನೆ ಭೇಟಿ ಮಾಡಿ ಯಾವೂದೆ ಮಗು ಲಸಿಕೆಯಿಂದ ವಂಚಿತರಾಗದಂತೆ ನಿಗಾ ವಹಿಸುತ್ತದೆ ಆದ್ದರಿಂದ ಸಿಬ್ಬಂದಿಯವರು ಮನೆ ಭೇಟಿ ಮಾಡುವುದನ್ನು ಕಾಯದೆ ಸನೀಪದ ಬೂತ್‌ಗಳಿಗೆ ಮಕ್ಕಳನ್ನು ಮೊದಲನೆ ದಿನವೆ ಕರೆದೊ ಯ್ಯುತ್ತಾ ಲಸಿಕೆ ಹಾಕಿಸಿ" ಎಂದರು.

ಸರ್ಕಾರಿ ಉನ್ನತಿಕರಿಸಿದ ಹಿರಿ ಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಬಸನಗೌಡ ಬಿರಾದಾರ ಮಾತನಾಡಿ, "ಭಾರತ ಪೋಲಿಯೋ ಮುಕ್ತವಾಗಿದ್ದರೂ ಪದೆ ಪದೆ ಇನ್ನೂ ಹಲವು ವರ್ಷಗಳ ವರೆಗೆ ಸರ್ಕಾರ ಕಾರ್ಯಕ್ರಮ ಹಮ್ಮಿಕೊಂಡು ನಿಮ್ಮ ಮಕ್ಕಳಲ್ಲಿ ಪೋ ಲಿಂಯೊ ರೋಗ ಹರಡದಂತೆ ನಿಗಾವಹಿಸುತ್ತಿದೆ ಕಾರಣ ಮುಂಜಾಗ್ರತೆಗಾಗಿ ಪ್ರತಿ ವರ್ಷದಂತೆ ಈ ವರ್ಷವು ಲಸಿಕೆ ನೀಡಲಾಗುತ್ತದೆ. ತಪ್ಪದೇ ಪೋಲಿಯೊ ಲಸಿಕೆ ಹಾಕಿಸಿ ಎಂದು ಸಲಹೆ ನೀಡಿದರು.

ತಾಲೂಕಾ ಮೇಲ್ವಿಚಾರಕ ಎಫ್.ಎ.ಹಣಗಿ ಶಾಲಾ ಮಕ್ಕಳಿಂದ ಸ್ಲಂ ಘೋಷಿತ ಎಂ.ಬಿ ಕಾಲೋನಿಯ ವೃತ್ತದಲ್ಲಿ ಮಕ್ಕಳಿಂದ ಮಾನವ ಸರಪಳಿ ನಿರ್ಮಿಸಿ ಘೋಷಣೆಗಳನ್ನು ಹಾಕಿಸುತ್ತಾ ಗಮನ ಸೆಳೆದು ಮಾತನಾಡಿ "ಹಿಂದೆ ಎಷ್ಟೇ ಸಾರಿ ಲಸಿಕೆ ಕೊಡಿಸಿದ್ದರೂ ಈ ಅಭಿಯಾನದಲ್ಲಿ ತಪ್ಪದೇ ಪೋಲಿಯೊ2ಹನಿ ನಿಮ್ಮ 5ವರ್ಷದ ಮಕ್ಕಳಿಗೆ ಹಾಕಿಸಿ. ಪೋಲಿಯೋ ಲಸಿಕೆ ಸಂಪೂರ್ಣ ಸುರಕ್ಷಿತ, ಎರಡು ಜೀವರಕ್ಷಕ ಹನಿಗಳು ಮಗುವಿನ ಬೆಳವಣಿಗೆಗೆ ಸಹಕಾರಿ ಎಂದರು.

2020ರಿಂದ ಭಾರತದಲ್ಲಿ ಯಾವುದೇ ಪೋಲಿಯೋ ಪ್ರಕರಣಗಳು ವರದಿಯಾಗಿಲ್ಲ ಮತ್ತು ಭಾರತ ಪೋಲಿಯೋ ಮುಕ್ತ ರಾಷ್ಟ್ರ ಘೋಷಣೆಯಾಗಿದ್ದರೂ, ವಲಸೆ ಮತ್ತು ಗಡಿ ರಾಜ್ಯ ಮತ್ತು ದೇಶ, ಪ್ರದೇಶಗಳಿಂದ ಹೊಸ ಪ್ರಕರಣಗಳ ನಿಯಂತ್ರಣಕ್ಕಾಗಿ ರಾಷ್ಟ್ರೀಯ ಪಲ್ಸ್ ಪೋಲಿಯೋ ಮುಂದುವ ರೆದಿದೆ. ರಾಷ್ಟ್ರೀಯ ಕಾರ್ಯಕ್ರಮವು ಎಲ್ಲ ಇಲಾಖೆಗಳ ಸಹಯೋಗದೊಂದಿಗೆ ಮೇಲ್ವಿಚಾರಣೆ ನಡೆಯುತ್ತಿದ್ದು, ಘನ ಸರ್ಕಾರಗಳು ಹದ್ದಿನ ಕಣ್ಗಾವಲು ನಡೆಸುತ್ತಿವೆ" ಎಂದರು.

ಗ್ರಾಮದ ಪ್ರಮುಖ ಮುಖ್ಯರಸ್ತೆಯಿಂದ ಮಹೆಬೂಬಿಯಾ ಕಾಲೋನಿ ಬೀದಿಗಳಲ್ಲಿ ಶಾಲಾ ಮಕ್ಕಳು, ಸ್ಥಳೀಯರು ಮತ್ತು ಆರೋಗ್ಯ ಸಿಬ್ಬಂದಿ ಪಲ್ಸ್ ಪೋಲಿಯೋ ಕಾರ್ಯಕ್ರಮದ ಘೋಷಣೆ ಕೂಗುತ್ತಾ ಜಾಗೃತಿ ಜಾಥಾ ನಡೆಸಿದರು.

ಈ ಸಂದರ್ಭದಲ್ಲಿ ಉಪಕೇಂದ್ರದ ಪಿ.ಎಚ್.ಸಿ.ಓ ತ್ರೇಜಾ, ಆಶಾ ಕಾರ್ಯಕರ್ತರಾದ ಮಾಲನಬಿ, ಕಸ್ತೂರಿ, ಶಿಕ್ಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು

# ಬೈಲ್ ಮರ್ಚೆಡ್ ಗ್ರಾಮದಲ್ಲಿ ಅಗ್ನಿ ಅವಘಡ ರೈತರಿಗೆ ಲಕ್ಷಾಂತರ ರೂಪಾಯಿ ನಷ್ಟ

ಯುವಮಾರ್ಗ ಸುದ್ದಿ



**ಮಾನ್ವಿ,ಡಿ.19–** ತಾಲೂಕಿನ ಬೈಲಮರ್ಚೆಡ್ ಗ್ರಾಮದಲ್ಲಿ ಶುಕ್ರವಾರ ಬೆಳಿಗ್ಗೆ 11 ಗಂಟೆಯ ಸುಮಾರಿಗೆ ಭೀಕರ ಅಗ್ನಿ ಅವಘಡ ಸಂಭವಿಸಿದ್ದು, ರೈತರು ಸಂಗ್ರಹಿಸಿಟ್ಟಿದ್ದ ಲಕ್ಷಾಂತರ ರೂಪಾಯಿ ಮೌಲ್ಯದ ಕೃಷಿ ಉತ್ಪನ್ನಗಳು ಬೆಂಕಿಗೆ ಆಹುತಿಯಾಗಿವೆ. ಗ್ರಾಮದ ರೈತರಾದ ಬಸವರಾಜ, ಚಂದ್ರ, ಅನುಸೂಯಮ್ಮ, ಆಂಜನೇಯ, ಈಶಪ್ಪ ಹಾಗೂ ಮೌನೇಶ ಎಂಬುವವರು ತಮ್ಮ ಜಾನುವಾರುಗಳಿಗಾಗಿ ಬಯಲು ಪ್ರದೇಶದಲ್ಲಿ ಸಂಗ್ರಹಿಸಿಟ್ಟಿದ್ದ ಎರಡು ಭತ್ತದ ಮೇವಿನ ಬಣವೆಗಳು, ಒಂದು ಜೋಳದ ಸಪ್ಪೆಯ ಬಣವೆ ಹಾಗೂ ಸುಮಾರು 20 ಎಕರೆಯಲ್ಲಿ ಬೆಳೆದು ಸಂಗ್ರಹಿಸಿಟ್ಟಿದ್ದ ಹತ್ತಿ ಸಂಪೂರ್ಣವಾಗಿ ಸುಟ್ಟು ಭಸ್ಮವಾಗಿದೆ. ಈ ಆಕಸ್ಮಿಕ ಬೆಂಕಿ ಅವಘಡದಿಂದಾಗಿ ರೈತರಿಗೆ ಅಂದಾಜು 4 ಲಕ್ಷ ರೂಪಾಯಿಗಳಷ್ಟು ಆರ್ಥಿಕ ನಷ್ಟ ಉಂಟಾಗಿದೆ ಎಂದು ಮಾನ್ವಿ ಅಗ್ನಿಶಾಮಕ ಠಾಣಾಧಿಕಾರಿ ರಂಗಪ್ಪ ತಿಳಿಸಿದ್ದಾರೆ.

ಘಟನೆಯ ಬಗ್ಗೆ ಮಾಹಿತಿ ಲಭಿಸುತ್ತಿದ್ದಂತೆಯೇ ಮಾನ್ವಿ ಅಗ್ನಿಶಾಮಕ ಇಲಾಖೆಯ ಸಹಾಯಕ ಠಾಣಾಧಿಕಾರಿ ಹಾಜಿಮೀಯ ಹಾಗೂ ಸಿಬ್ಬಂದಿಗಳು ತಕ್ಷಣ ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸುವ ಕಾರ್ಯಾಚರಣೆ ನಡೆಸಿದರು. ಅಗ್ನಿಶಾಮಕ ಸಿಬ್ಬಂದಿಗಳು ಹರಸಾಹಸ ಪಟ್ಟು ಬೆಂಕಿಯನ್ನು ಹತೋಟಿಗೆ ತರುವ ಮೂಲಕ ಪಕ್ಕದಲ್ಲೇ ಇದ್ದ ಜನವಸತಿ ಪ್ರದೇಶಗಳಿಗೆ ಬೆಂಕಿ ವ್ಯಾಪಿಸದಂತೆ ತಡೆದು, ಸಂಭವಿಸಬಹುದಾಗಿದ್ದ ದೊಡ್ಡ ಮಟ್ಟದ ಅನಾಹುತವನ್ನು ತಪ್ಪಿಸಿದ್ದಾರೆ. ಇದೇ ವೇಳೆ ಗ್ರಾಮಸ್ಥರು ಕೂಡ ಶ್ರಮವಹಿಸಿ ಬಣವೆಗಳ ಹತ್ತಿರ ಕಟ್ಟಲಾಗಿದ್ದ ಎಮ್ಮೆಗಳನ್ನು ಸುರಕ್ಷಿತವಾಗಿ ರಕ್ಷಿಸುವಲ್ಲಿ ಸಹಕರಿಸಿದರು.

## ಡಿ.20ರಂದು ನಗರದಲ್ಲಿ ನಿರಂತರ ವಿದ್ಯುತ್ ಪೂರೈಕೆ

**ರಾಯಚೂರು,ಡಿ.19–** ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದ ನಿಮಿತ್ತ ಇಲ್ಲಿನ ಜೆಸ್ಕಾಂ ನೋಡಲ್ ಆಫೀಸರ್ 220ಕೆಎ ಸ್ವೀಕರಣ ಕೇಂದ್ರದ ಕೆಪಿಟಿಸಿಎಲ್‌ನಿಂದ ಡಿಸೆಂಬರ್ 20ರಂದು ನಿಗದಿಯಾಗಿದ್ದ ವಿದ್ಯುತ್ ವ್ಯತ್ಯಯ ನಿರ್ಧಾರವನ್ನು ಕೈಬಿಟ್ಟು ನಗರದಲ್ಲಿ ನಿರಂತರವಾಗಿ ವಿದ್ಯುತ್ ಪೂರೈಕೆ ಮಾಡಲಾಗುವುದು ಎಂದು ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಡಿಸೆಂಬರ್ 22ರಂದು ಉದ್ಯೋಗಕ್ಕಾಗಿ ಸಂದರ್ಶನ

**ರಾಯಚೂರು,ಡಿ.20–** ನಗರದ ಮಾಣಿಕ ನಗರದಲ್ಲಿ ಡಿಸೆಂಬರ್ 22ರ ಬೆಳಿಗ್ಗೆ 10 ಗಂಟೆಗೆ ಉದ್ಯೋಗಕ್ಕಾಗಿ ಸಂದರ್ಶನವು ಆಯೋಜಿಸಲಾಗಿದೆ. ಐ.ಟಿ.ಐ.ಕೋರ್ಸನ ಎಲೆಕ್ಟ್ರಿಶೀಯನ್, ಎಲೆಕ್ಟ್ರಾನಿಕ್, ಮೆಕ್ಯಾನಿಕ್, ಫೀಟರ್, ಟರ್ನರ್, ಎಮ್.ಎಮ್.ವಿ, ಎಮ್.ಆರ್.ಎಸಿ, ವೆಲ್ಡರ್, ಕೋಪಾ ವೃತ್ತಿಯ ತರಬೇತುದಾರರು ಮತ್ತು ಡಿಪ್ಲೋಮಾ ಹಾಗೂ ಪದವಿಯಲ್ಲಿ ಉತ್ತೀರ್ಣರಾದ ಪುರುಷ ಹಾಗೂ ಮಹಿಳಾ ಅಭ್ಯರ್ಥಿಗಳು ಇದರ ಸದುಪಯೋಗವನ್ನು ಪಡೆಯಬಹುದಾಗಿದೆ.

ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಸಹಯೋಗದಲ್ಲಿ ಉದ್ಯೋಗದ ಸಂದರ್ಶನಕ್ಕಾಗಿ ರಾಯಚೂರಿನ ಸಾವಿತ್ರಿ ಗ್ರೂಪ್, ಹೋಂಡಾ ಮೋರ್ಸ ಬೆಂಗಳೂರಿನ ಟಾಟಾ ಎಲೆಕ್ಟ್ರಿಕಲ್, ಬಳ್ಳಾರಿಯ ಜೆ.ಎಸ್.ಡಬ್ಲ್ಯು, ಕೋಲಾರದ ಟಾಟಾ ಮೋರ್ಸ, ಹೋಂಡಾ ಮೋರ್ಸ, ಕಲಬುರಗಿಯ ಅರ್ಥ ಮೂವರ್ಸ, ಬೆಂಗಳೂರಿನ ವಿಸನ್ ಇಂಡಿಯಾ ಲಿಮಿಟೆಡ್, ಹೈದ್ರಾಬಾದ್ ಎಮ್.ಆರ್.ಎಫ್ ಟೈರ್ಸ ಸೇರಿದಂತೆ ಪ್ರತಿಷ್ಠಿತ ಕಂಪನಿಗಳ ಪ್ರತಿನಿಧಿಗಳು ಆಗಮಿಸುತ್ತಿದ್ದು, ಸ್ಥಳದಲ್ಲಿಯೇ ಸಂದರ್ಶನ ನೆಡೆಸಿ ಸೂಕ್ತ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 7760776556, 9590649335, 9035064582ಗೆ ಸಂಪರ್ಕ ಮಾಡಬಹುದಾಗಿದೆ ಎಂದು ರಾಯಚೂರಿನ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರಾಯಚೂರು ಗ್ರಾಮೀಣ ಪ್ರದೇಶದಲ್ಲಿ ಡಿ. 22ರಂದು ವಿದ್ಯುತ್ ವ್ಯತ್ಯಯ

**ರಾಯಚೂರು,ಡಿ.19–** ಇಲ್ಲಿನ ಜೆಸ್ಕಾಂ ಗ್ರಾಮೀಣ ಕಾರ್ಯ ಮತ್ತು ಪಾಲನೆ ಉಪ ವಿಭಾಗದ ವ್ಯಾಪ್ತಿಯ 110/11 ಕೆವಿ ಮಲಿಯಾಬಾದ ವಿದ್ಯುತ್ ಉಪ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾರ್ಯ ಹಮ್ಮಿಕೊಂಡಿರುವ ಪ್ರಯುಕ್ತ ಡಿಸೆಂಬರ್ 22ರ ಬೆಳಿಗ್ಗೆ 10 ರಿಂದ ಸಂಜೆ 4 ಗಂಟೆವರೆಗೆ ಮಲಿಯಾಬಾದ ವಿದ್ಯುತ್ ಉಪ ಕೇಂದ್ರದ ವ್ಯಾಪ್ತಿಯಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಜೆಸ್ಕಾಂ ಗ್ರಾಮೀಣ ಕಾರ್ಯ ಮತ್ತು ಪಾಲನೆ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ತುರ್ವಿಹಾಳ ಉಪ ಚುನಾವಣೆ; ಮದ್ಯ ಮಾರಾಟ ನಿಷೇಧಿಸಿ ಆದೇಶ

**ರಾಯಚೂರು,ಡಿ.19–** ಸಿಂಧನೂರು ತಾಲೂಕಿನ ತುರ್ವಿಹಾಳ ಪಟ್ಟಣ ಪಂಚಾಯಿತಿಯಲ್ಲಿ ತೆರವಾಗಿರುವ ಸದಸ್ಯ ಸ್ಥಾನಕ್ಕೆ ಉಪ ಚುನಾವಣೆಯ ಮತದಾನವು ಡಿಸೆಂಬರ್ 21ರಂದು ನಡೆಯಲ್ಲಿದ್ದು, ಮತದಾನವು ಸೂಸುತ್ರವಾಗಿ, ಶಾಂತಿ ರೀತಿಯಿಂದ ನಡೆಸುವ ಉದ್ದೇಶದಿಂದ ಹಾಗೂ ಕಾನೂನು ಮತ್ತು ಸುವ್ಯವಸ್ಥೆಯನ್ನು ಪಾಲಿಸುವ ಹಿತದೃಷ್ಟಿಯಿಂದ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ರೀತಿಯ ಮದ್ಯ ತಯಾರಿಕಾ ಘಟಕಗಳು, ಸಾಗಾಣಿಕೆ, ಸಂಗ್ರಹಣೆಯನ್ನು ಹಾಗೂ ಮಾರಾಟ ಮಳಿಗೆಗಳನ್ನು ಡಿ.19ರ ಸಂಜೆ 05 ಗಂಟೆಯಿಂದ ಡಿ.21ರ ಮಧ್ಯರಾತ್ರಿ 12 ಗಂಟೆವರೆಗೆ ಬಂದ್ ಇಡುವಂತೆ ಜಿಲ್ಲಾ ದಂಡಾಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ಆದೇಶ ಹೊರಡಿಸಿದ್ದಾರೆ.

## ತುರವಿಹಾಳದಲ್ಲಿ ಜಾತ್ರೆ, ಸಂತೆ, ಉತ್ಸವ, ಉರುಸುಗಳ ಮುಂದೂಡಿಕೆ

**ರಾಯಚೂರು.ಡಿ.19–** ಸಿಂಧನೂರು ತಾಲೂಕಿನ ತುರವಿಹಾಳದಲ್ಲಿ ಡಿ.21ರಂದು ಪಟ್ಟಣ ಪಂಚಾಯತಿ ಉಪ ಚುನಾವಣೆ ನಡೆಯಲಿದ್ದು, ಆದ್ದರಿಂದ ಅಂದು ತುರವಿಹಾಳ ಪಟ್ಟಣ ಪಂಚಾಯಿತಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ ನಡೆಯುವ ಜಾತ್ರೆ, ಜಾನುವಾರ ಸಂತೆ, ಉತ್ಸವ, ಉರುಸು ಹಾಗೂ ಮುಂತಾದವುಗಳನ್ನು ಮುಂದೂಡಿ ಜಿಲ್ಲಾ ದಂಡಾಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ಆದೇಶ ಹೊರಡಿಸಿದ್ದಾರೆ.

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H